ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೭ ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗಾಗಲೇ ನಮ್ಮ ಕೇಂದ್ರ ಸರ್ಕಾರ ಪಕ್ಷಾಂತರ ನಿಷೇದ ಮಸೂದೆಯನ್ನು ಜಾರಿಗೆ ತಂದು ಅದು ಈಗಾಗಲೇ ಜಾರಿಯಲ್ಲಿದೆ. ಆ ಮಸೂದೆ ಲೋಕಸಭಾ ಸದಸ್ಯರುಗಳಿಗೆ ಹಾಗೂ ಶಾಸಕರುಗಳಿಗೆ ಅನ್ವಯವಾಗುತ್ತದೆ. ಆ ದಿಕ್ಕಿನಲ್ಲಿಯೇ ಸ್ಥಳೀಯ ಸಂಸ್ಥೆ ಗಳಾದ ಮುನಿಸಿಪಾಲಿಟಿಗಳು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸದಸ್ಯರುಗಳು ಪಕ್ಷಾಂತರ ಮಾಡಬಾರದು ಎನ್ನುವ ಉದ್ದೇಶದಿಂದ ಆದ್ಯಾದೇಶವನ್ನು ಹೊರಡಿಸಲಾಗಿದೆ. ಅದನ್ನು ಈಗ ಮಸೂದೆಯ ರೂಪದಲ್ಲಿ ಇಟ್ಟಿದ್ದೇವೆ. ಲೋಕಸಭಾ ಸದಸ್ಯರುಗಳಿಗೆ ಅನ್ವಯವಾಗುವ ರೀತಿ ಯಲ್ಲಿಯೇ ಹೆಚ್ಚು ಕಡಿಮೆ ಎಲ್ಲಾ ನಿಯಮಗಳನ್ನು ಅಳವಡಿಸಲಾಗಿದೆ. ಒಂದು ಪಕ್ಷದ ಸದಸ್ಯರು ಮೂರನೇ ಒಂದು ಭಾಗದಷ್ಟು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ ಅದು ಆ ಪಕ್ಷದ ಒಂದು ಭಾಗವಾಗುತ್ತದೆನ್ನುವುದು ಸಂಸತ್ತಿನ ವಿಧೇಯಕದಲ್ಲಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಗಳು ಇರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಲ್ಲಿ ಹೆಚ್ಚು ಸದಸ್ಯರುಗಳು ಇರುವುದಿಲ್ಲ. ಆದ್ದರಿಂದ ಶೇಕಡ ೫೦ರಷ್ಟು ಸದಸ್ಯರು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ. ಆ ಪಕ್ಷದ ಒಂದು ಭಾಗವಾಗುತ್ತದೆ. ಅಷ್ಟನ್ನು ಮಾತ್ರ ಇಲ್ಲಿ ಅಳವಡಿಲಸಾಗಿದೆ. ಸ್ವತಂತ್ರವಾಗಿ ಚುನಾಯಿತನಾದ ಒಬ್ಬ ಸದಸ್ಯನಿಗೂ ಸಹ ಪಕ್ಷಾಂತರ ನಿಷೇದ ಮಸೂದೆ ಅನ್ವಯ ವಾಗುತ್ತದೆ. ನಾಮ ನಿರ್ದೇಶನ ಹೊಂದಿದವರಾಗಲೀ ಪಕ್ಷೇತರ ಅಭ್ಯರ್ಥಿಗಳಾಗಲೀ ಯಾವುದೇ ಒಂದು ಪಕ್ಷಕ್ಕೆ ಸೇರಿಕೊಳ್ಳಲು ಆರು ತಿಂಗಳುಗಳ ಕಾಲ ಕಾಲಾವಕಾಶ ಇರುತ್ತದೆ. ಆರು ತಿಂಗಳು ಆದಮೇಲೆ ಪಕ್ಷಾಂತರ ಮಾಡಿದರೆ ಆತ ಅನರ್ಹನಾಗುತ್ತಾನೆ ಎನ್ನುವ ಅಂಶಗಳನ್ನು ಅಳವಡಿಸಿ ಮಸೂದೆಯನ್ನು ತರಲಾಗಿದೆ. ಪಕ್ಷೇತರರು ಆದರೂ ಕೂಡ ಅವರು ಇಷ್ಟಬಂದ ಹಾಗೆ ಪಕ್ಷಗಳನ್ನು ಬದಲಾಯಿಸುವ ಹಾಗೆ ಇಲ್ಲ. ಯಾವುದೇ ಪಕ್ಷಕ್ಕೆ ಸೇರಬೇಕಾದರೆ ಆರು ತಿಂಗಳೊಳಗೆ ಸೇರಿಕೊಳ್ಳ ಬಹುದು. ಸ್ವತಂತ್ರವಾಗಿರುವುದು ಅಭಿಪ್ರಾಯ ಪಟ್ಟರೆ ಆರು ತಿಂಗಳಲ್ಲಿ ಒಪ್ಪಿಗೆ ಕೊಡಬೇಕೆಂದು ಇದೆ. ಇಷ್ಟು ಇದರಲ್ಲಿ ಇದೆ. ಇದಕ್ಕೆ ಸಭೆಯ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಾ ಹೋಲ್‌ಸೇಲ್ ಆಗಿ ಆಗಬೇಕು. ರಿಟೈಲ್ ಆಗಿ ಅಲ್ಲ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಒಂದು ಕಾನೂನನ್ನು ಮಾಡಬೇಕೆಂಬ ಉದ್ದೇಶದಿಂದ ಪಕ್ಷಾಂತರ ನಿಷೇಧ—ಈ ಒಂದು ಕಾನೂನು ಅನ್ವಯವಾಗ ತಕ್ಕಂಥಾದ್ದು. ಇಲ್ಲಿ ಮುನಿಸಿಪಾಲಿಟಿ, ಪುರಸಭೆಗಳಲ್ಲಿ ಇರತಕ್ಕಂಥ ಸದಸ್ಯರಿಗೆ ಸಂಬಂಧ ಬರುತ್ತದೆ. ಆಮೇಲೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅದು ಮತ್ತು ಮುನಿಸಿಪಾಲಿಟಿಗಳ ಅಧಿನಿಯಮ ಗಳ ಪ್ರಕಾರ ಬರತಕ್ಕದ್ದು ಹಾಗೂ ಚುನಾಯಿತರಾದಂಥ ಅಥವಾ ನಾಮನಿರ್ದೇಶಿತ ಸದಸ್ಯರಿಗೆ ಸಂಬಂಧಪಟ್ಟ ಹಾಗೆ ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತು. ಇಷ್ಟೊಂದು ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ಸಂಬಂಧಪಟ್ಟರತಕ್ಕಂಥ ಒಂದು ಕಾನೂನು. ಇವರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೂಲಭೂತವಾದ ನೀತಿ ಏನಿದೆ, ಇದನ್ನು ನಾವು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ. ನಾವು ಇಲ್ಲಿ ಮೊದಲಬಾರಿಗೆ ಇದನ್ನು ಏನೂ ಚರ್ಚೆ ಮಾಡುತ್ತಿಲ್ಲ. ಈ ಒಂದು ವಿಷಯದ ಬಗ್ಗೆ ಚರ್ಚೆ ಈ ಸದನದಲ್ಲಿ ಮತ್ತೊಂದು ಸಾರಿ ಬಂದಿತ್ತು. ಬಹಳ ಶೀಘ್ರವಾಗಿ ಈ ಒಂದು ಕಾನೂನನ್ನು ತರತಕ್ಕ ಒಂದು ಪ್ರಯತ್ನವನ್ನು ನಿಮ್ಮ ಸರ್ಕಾರದವರು ಮಾಡಿದ್ದರು. ಶಾಸನಸಭಾ ಸದಸ್ಯರಿಗೆ, ಅಥವಾ ವಿಧಾನ ಪರಿಷತ್ತು ಹಾಗೂ ವಿಧಾನಸಭೆಯ ಸದಸ್ಯರುಗಳಿಗೆ ಸಂಬಂಧಪಟ್ಟಂತೆ ಕಾನೂನು ತರತಕ್ಕಂಥ ಒಂದು ತರಾತುರಿಯ ಪ್ರಯತ್ನ ಈ ಶಾಸನ ಸಭೆಯಲ್ಲಿ ನಡೆದಿತ್ತು. ಆಗ ನಾವು ಒಂದು ಅಭಿಪ್ರಾಯವನ್ನು ಕೊಟ್ಟಿದ್ದೆವು. ಈ ಕಾನೂನನ್ನು ಮಾಡತಕ್ಕಂಥ ಹಕ್ಕು, ಶಕ್ತಿ ಕಾನೂನು ಪ್ರಕಾರ ಅದು ಸಂಸತ್ತಿಗೆ ಇದೆಯೇ ವಿನಹ ನಿಮಗೆ ಇಲ್ಲವೆಂದು ಆ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೆವು. ಆದರೆ ಈ ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ. ಕೇಂದ್ರ ಸರ್ಕಾರದವರು ಈ ವಿಚಾರ ಮಾಡಿ, ಪೂರ್ವ ಪೀಠಿಕೆಯಲ್ಲಿ ಹೇಳಿದ ಹಾಗೆ ಒಂದು ಕಾನೂನನ್ನು ತಂದಿದ್ದಾರೆ. ಅದು ರಾಷ್ಟ್ರಾದ್ಯಂತ ಜಾರಿಯಲ್ಲಿದೆ. ಸಂಸತ್ ಸದಸ್ಯರಿಗೆ ಸಂಬಂಧಪಟ್ಟ ಹಾಗೆ ಮತ್ತು ಶಾಸನ ಸಭೆಗಳಿಗೆ ಸಂಬಂಧಪಟ್ಟ ಹಾಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಸೇರಿದಹಾಗೆ ಈಗಾಗಲೇ ಈ ಕಾನೂನು ನಮ್ಮ ರಾಷ್ಟ್ರದಲ್ಲಿ ಜಾರಿಯಲ್ಲಿದೆ. ಈ ಮಸೂದೆ ಕೂಡ ಆ ದಿಸೆಯಲ್ಲಿ ನಡೆದಿದೆ. ಇಲ್ಲಿ ನೀವು ಕೆಲವು ಮಸೂದೆಗಳ ಜೊತೆಯಲ್ಲೇ ಈ ಸದನದ ಒಪ್ಪಿಗೆಗೆ ತಂದಿರ ತಕ್ಕಂಥ ಒಂದು ಮಸೂದೆ. ಈ ನೀತಿಯನ್ನು ನಾವು ಏತಕ್ಕೆ ಒಪ್ಪುತ್ತೇವೆ ? ಮಾನ್ಯ ಮತದಾರರು ತಮಗೆ ಇರತಕ್ಕಂಥ ಹಕ್ಕನ್ನು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಒಬ್ಬ ವ್ಯಕ್ತಿಗೆ ಅಥವಾ ಪಕ್ಷಕ್ಕೆ ಅಧಿಕಾರವನ್ನು ಕೊಡುತ್ತಾರೆ, ಅದರ ಬಗ್ಗೆ ಒಂದು ವ್ಯವಸ್ಥೆಯನ್ನು ನಾವು ಇಟ್ಟಿರಬೇಕು ಎನ್ನುವಂತಾದ್ದು ಇಲ್ಲಿಯ ಉದ್ದೇಶ. ಅವರು ಕೊಡತಕ್ಕಂಥ ಮತ ಅದು ಬಹುಮತವಾಗುತ್ತದೋ ಅಥವಾ ಅಲ್ಪಮತ ಆಗುತ್ತದೆಯೋ ಅಥವಾ ಪಕ್ಷೇತರರು ಅಂದರೆ ಪಕ್ಷಗಳಿಗೆ ಸಂಬಂಧಪಡದೇ ಇರತಕ್ಕಂಥ ವ್ಯಕ್ತಿಗಳಿಗೋ ಎನ್ನುವಂಥಾದ್ದು ಎಲ್ಲಾ ವಿಚಾರಗಳು ಇಲ್ಲಿ ಒಳಗೊಂಡಿರುತ್ತವೆ. ನಮ್ಮ ರಾಜ್ಯಾಂಗದ ಹಾಗೂ ರೆಪ್ರೆಸೆಂಟೇಶನ್ ಆಫ್ ಪೀಪಲ್ಸ್ ಆ್ಯಕ್ಟ್ ಪ್ರಕಾರ. ಪಕ್ಷ ರಹಿತವಾಗಿ ಇರತಕ್ಕಂಥ ವ್ಯವಸ್ಥೆಯನ್ನು ನಾವು ಇಟ್ಟಿದ್ದೇವೆ. ಇಲ್ಲದೇ ಹೋದರೆ, ಸ್ವತಂತ್ರ ವ್ಯಕ್ತಿಗಳು, ಪಾರ್ಲಿಮೆಂಟಿಗೆ, ವಿಧಾನಸಭೆಗೆ, ಮಂಡಲ್ ಪಂಚಾಯಿತಿಗೆ, ಜಿಲ್ಲಾಪರಿಷತ್ತಿಗೆ ನಾವು ವಿಚಾರ ಮಾಡತಕ್ಕಂಥ ಪ್ರಮೇಯ ಬರುತ್ತಲೇ ಇರಲಿಲ್ಲ. ೧೯೭೭ಕ್ಕಿಂತ ಮುಂಚೆ ಕಾಂಗ್ರೆಸ್ ಪಕ್ಷಕ್ಕೆ ಪಾರ್ಲಿಮೆಂಟ್‌ನಲ್ಲಿ ಬಹುಮತ ಬಂತು. ೧೯೭೭ರಲ್ಲಿ ಜನತಾ ಪಕ್ಷಕ್ಕೆ ಬಹುಮತ, ಬಂತು ಕಾಂಗ್ರೆಸ್ ಪಕ್ಷ ಜನತಾ ಪಕ್ಷ, ಬಿ.ಜೆ.ಪಿ. ಮತ್ತು ಕಮ್ಯುನಿಸ್ಟ್ ಪಕ್ಷ ಹೀಗೆ ನೂರೆಂಟು ಪಕ್ಷಗಳು ಇವೆ. ಒಂದು ವೇಳೆ ಪಾರ್ಲಿಮೆಂಟ್ ಅಥವಾ ಶಾಸನಸಭೆಗಳಿಗೆ ಬಹುಮತ ಯಾವುದೇ ರಾಜಕೀಯ ಪಕ್ಷಗಳಿಗೆ ಬರದೇ ಸ್ವತಂತ್ರ ಅಭ್ಯರ್ಥಿಗಳೇ ಬಂದರೇ ? ಇವತ್ತು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಬಂದಿಲ್ಲ ಹಾಗೆಯೇ ಕೆಲವು ಮಂಡಲ್ ಪಂಚಾಯತ್‌ಗಳಲ್ಲೂ ಪಕ್ಷಗಳಿಗೆ ಬಹುಮತ ಬಂದಿಲ್ಲ. ನಾವು ಯಾವುದೇ ಗುರುತು ಹಾಕಿಕೊಂಡು ಪ್ರಚಾರ ನಡೆಸಿದರೂ ಬಂದಿಲ್ಲ. ರೈತನ ಗುರುತು ಹಸ್ತದ ಗುರುತು ಹೂವಿನ ಗುರುತು ಹೀಗೆ ಯಾವುದೇ ಚಿಹ್ನೆ ಹಾಕಿಕೊಂಡರೂ ಕೆಲವು ಮಂಡಲ್ ಪಂಚಾಯತ್‌ಗಳಲ್ಲಿ ಬಹುಮತ ಬಂದಿಲ್ಲ. ಸ್ವತಂತ್ರರಾಗಿ ಗೆದ್ದಿರತಕ್ಕ ಪಕ್ಷೇತರ ಅಭ್ಯರ್ಥಿಗಳು ಗೆದ್ದು ಬಂದಿದ್ದಾರೆ, ಅವರು ಇವತ್ತು ಸದಸ್ಯರಾಗಿದ್ದಾರೆ. ಬಹುಮತ ಅಲ್ಲಿ ಯಾವುದೇ ರಾಜಕೀಯ ಪಕ್ಷಗಳಿಗೆ ಇಲ್ಲ, ಸ್ವತಂತ್ರವಾಗಿ ಗೆದ್ದಿರತಕ್ಕ ಅಭ್ಯರ್ಥಿಗಳ ಬಹುಮತ ಕೆಲವು ಕಡೆ ಇದೆ. ಈ ಒಂದು ವ್ಯವಸ್ಥೆ ಪುಣ್ಯಕ್ಕೆ ಪಾರ್ಲಿಮೆಂಟ್‌ಗೆ ಬಂದಿಲ್ಲ ಶಾಸನಸಭೆಗಳಿಗೆ ಬಂದಿಲ್ಲ ಜನತೆ ಮತವನ್ನು ಚಲಾವಣೆ ಮಾಡಬೇಕಾದರೆ. ಪಕ್ಷದ ಮೂಲಭೂತ ನೀತಿ ಸಿದ್ಧಾಂತಗಳು ಕಾರ್ಯಕ್ರಮಗಳು ಇವುಗಳಿಗೆ ಗಮನ ಕೊಟ್ಟು ಮತವನ್ನು ಕೊಡುತ್ತಾರೆಂಬುದು ನಮ್ಮ ನಂಬಿಕೆ ಮತ್ತು ಮತವನ್ನು ಕೊಟ್ಟಿದ್ದಾರೆ. ಸುಮಾರಾಗಿ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ನಾವು ನೋಡಿದ್ದೇವೆ. ಸಮಾಜದಲ್ಲಿರತಕ್ಕ ಬಡವರು ಹಸ್ತದ ಗುರುತಿಗೆ ಏಕೆ ಮತವನ್ನು ಕೊಡುತ್ತಾರೆ ಎಂದರೆ, ಜನತಾ ಮನೆಗಳನ್ನು ಕಟ್ಟಿಸಿ ಕೊಡುತ್ತಾರೆ ಅದಕ್ಕೋಸ್ಕರ ನಾವು ಮತವನ್ನು ಕೊಡುತ್ತೇವೆ ಎಂಬ ಅಭಿಪ್ರಾಯ. ಹೀಗೆ ಒಂದು ನೀತಿಯನ್ನು, ನಾಗರೀಕ, ಮಾನ್ಯ ಮತದಾರರು ಇಟ್ಟುಕೊಂಡು, ಮತವನ್ನು ಚಲಾವಣೆ ಮಾಡ ತಕ್ಕಂತ ಒಂದು ವಿಚಾರಧಾರೆ. ಇವತ್ತು ಪಕ್ಷಗಳು ಇರತಕ್ಕಂಥ ವ್ಯವಸ್ಥೆಯನ್ನು ನಾವು ಒಪ್ಪಿದ್ದೇವೆ. ಪಕ್ಷವನ್ನು ಬಿಟ್ಟು ಕೂಡ ಮತದಾನವನ್ನೂ ಪಡೆಯುವ ವ್ಯವಸ್ಥೆ ನಮ್ಮ ಸಮಾಜದಲ್ಲಿ ಇದೆ. ಈ ಒಂದು ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಇನ್ನು ಬಹಳ ಗೊಂದಲ ಪ್ರಾಯ. ಇದರಿಂದ ಮಾನ್ಯ ಮತದಾರನಿಗೆ ಇರತಕ್ಕಂಥ ಪರಿಸ್ಥಿತಿಯನ್ನು ವಿಚಾರಮಾಡಬೇಕಾಗುತ್ತದೆ ನಾವು ಪಕ್ಷದ ಮುಖಾಂತರ ಅಭ್ಯರ್ಥಿಗಳನ್ನು ನಿಲ್ಲಿಸಿ ಮಾನ್ಯ ಮತದಾರನಿಗೆ ಪಕ್ಷದ ನೀತಿ ಮುಂದಿಟ್ಟು ಪ್ರಜಾಪ್ರಭುತ್ವದ ನೀತಿಗನುಸಾರವಾಗಿ ದಯಮಾಡಿ ತಮ್ಮ ಮತವನ್ನು ಚಲಾವಣೆ ಮಾಡಿ ಎಂದು

ಕೇಳುತ್ತೇವೆ. ಮತದಾರರಿಂದ ಮತವನ್ನು ಯಾಚನೆ ಮಾಡುತೇವೆ. ಇಂತಹ ವ್ಯವಸ್ಥೆಯನ್ನೂ ನಾವು ಇಟ್ಟುಕೊಂಡು ಬಂದಿದ್ದೇವೆ. ನನಗನಿಸುತ್ತದೆ, ಈ ಮತವನ್ನು ಕೇಳತಕ್ಕಂಥ ವ್ಯವಸ್ಥೆಯನ್ನು ಏನಿಟ್ಟಿದ್ದೇವೆ ಇದರ ದುರುಪಯೋಗ, ಇದರ ಬಗ್ಗೆ ಕೆಲವೊಮ್ಮೆ ಮಾತನಾಡಿದ್ದೇವೆ. ಮತವನ್ನು ಚಲಾವಣೆ ಮಾಡಬೇಕಾದರೆ ಮಾನ್ಯ ಮತದಾರರು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ತನ್ನ ಹಕ್ಕನ್ನು ಚಲಾವಣೆ ಮಾಡಬೇಕಾದರೆ ಅವನು ಯಾವಾಗಲೂ ಇರತಕ್ಕಂಥ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ತನ್ನ ವಿವೇಚನೆಯ ಹಿನ್ನೆಲೆಯಲ್ಲಿ ತನ್ನ ಭವಿಷ್ಯಕ್ಕೆ, ತನ್ನ ಕುಟುಂಬದ ಸಮಾಜದ ರಾಜ್ಯದ ಮತ್ತು ದೇಶದ ಒಳಿತಿಗೋಸ್ಕರ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಇರತಕ್ಕಂತ ವಿಚಾರವನ್ನು ರೂಪಿಸಿಕೊಳ್ಳಬೇಕಾಗುತ್ತದೆ.

೩-೩೦ ಪಿ.ಎಂ.

ನನ್ನ ಪ್ರಕಾರ ಅವನ ವಿಚಾರ ಎಜುಕೇಟೀವ್ ಆಗಿರಬೇಕು, ಮತ್ತೊಬ್ಬರಿಗೆ ತಾನು ಕೊಡತಕ್ಕಂಥ ಮತ, ಮತ್ತೊಬ್ಬರಿಗೆ ಕೈದೀವಿಗೆಯಾಗಿರಬೇಕು ಎಂದು ಬಯಸುತ್ತಾನೆ. ನೋಡಿ ಎಂತಹ ಒಂದು ವಿಚಾರ. ಆಂಗ್ಲರ ಆಳ್ವಿಕೆಯನ್ನು ನಮ್ಮಿಂದ ತೆಗೆದು ಬಿಸಾಕಿದಾಗ ಮತ ಕೊಟ್ಟು ಒಬ್ಬ ವ್ಯಕ್ತಿಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡತಕ್ಕಂಥ ವಿಚಾರಧಾರೆ ಇದು. ಎಂತಹ ಮಹತ್ತರವಾದ ವಿಚಾರಧಾರೆ, ಈ ಒಂದು ವಿಚಾರಧಾರೆಯನ್ನು ಮೂಲಭೂತವಾಗಿ ಒಪ್ಪಿಕೊಂಡಿರತಕ್ಕಂಥ ಸಂದರ್ಭ ಅದರ ಆಳವಾದ ಅಭ್ಯಾಸ ಬೇಕಾಗಿಲ್ಲ. ಇಲ್ಲಿ ಮತ್ತೊಂದು ವಿಚಾರವನ್ನು ನಾವು ಏನು ಗಮನದಲ್ಲಿಡುವುದು, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಪಕ್ಷಗಳನ್ನು ಮುಂದಿಟ್ಟುಕೊಂಡು ಹೋಗಬೇಕೇ, ಪಕ್ಷಗಳನ್ನು ಬದಿಗಿಟ್ಟು ನಾವು ಹೋಗಬೇಕೇ ಎನ್ನತಕ್ಕಂಥಾ ಒಂದು ವಿಚಾರ ಕೂಡಾ ಬಹಳ ಚರ್ಚೆಯಾಗಿ ಒಪ್ಪಿಕೊಂಡಿರತಕ್ಕಂಥ ವಿಚಾರ. ಮಾನ್ಯ ಸಚಿವರಿಗೂ ಕೂಡಾ ಅದು ಗೊತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಈ ಒಂದು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳನ್ನು ನಡೆಸುವುದಕ್ಕಿಂತ ಮೊದಲು ನಾವು ಹಳೆಯ ಪಂಚಾಯತಿ ಚುನಾವಣೆಗಳನ್ನು, ತಾಲ್ಲೂಕು ಅಭಿವೃದ್ಧಿ ಮಂಡಲಿ ಚುನಾವಣೆಗಳನ್ನು ಕರ್ನಾಟಕ ರಾಜ್ಯದಲ್ಲಿ ನಡೆಸಿದ್ದೇವೆ. ಇನ್ನು ಉಳಿದಿರತಕ್ಕಂಥ ಸ್ಥಳೀಯ ಸಂಸ್ಥೆಗಳು ಎಂದರೆ ಪೌರಸಭೆ ಚುನಾವಣೆಗಳು ಮತ್ತು ಕಾರ್ಪೊರೇಷನ್ಸ್ ಚುನಾವಣೆಗಳು. ನಾವು ಇವುಗಳನ್ನೂ ಕೂಡಾ ಸ್ಪಷ್ಟವಾಗಿ ನಡೆಸಿದ್ದೇವೆ. ಹಿಂದೆ ಈ ವಿಚಾರ ಬಂದಾಗ, ಪಕ್ಷಗಳನ್ನು ಮುಂದಿಟ್ಟುಕೊಂಡು ಅರ್ಥಾತ್ ಪಕ್ಷದ ಚಿಹ್ನೆಯನ್ನು ಮುಂದಿಟ್ಟು ನಾವು ಚುನಾವಣೆಗೆ ಹೋಗಬೇಕೇ ಬೇಡವೇ ಎಂಬ ವಿಚಾರ ಬಂದು ಆಗ ಕಾಂಗ್ರೆಸ್ ಪಕ್ಷದ ಸರಕಾರ ಇದ್ದಾಗ, ತಾಲ್ಲೂಕು ಅಭಿವೃದ್ಧಿ ಮಂಡಲಿ ಚುನಾವಣೆಗಳು, ಪಂಚಾಯತಿ ಚುನಾವಣೆಗಳು ಬಂದಾಗ ಈ ವಿಚಾರ ಚರ್ಚೆಗೆ ಬಂದಿತ್ತು. ಇದೇ ತಾಲ್ಲೂಕು ಅಭಿವೃದ್ಧಿ ಮಂಡಲಿ ವಿಧೇಯಕ ನಮ್ಮ ಮುಂದೆ ಬಂದಾಗ ಅಭಿಪ್ರಾಯ ಭಿನ್ನ ಭಿನ್ನವಾಗಿ ಹೊರಹೊಮ್ಮಿಬಂದವು. ಕೆಲವರು ಪರವಾಗಿಲ್ಲ, ಏನೂ ಆಗುವುದಿಲ್ಲ, ಆಯಾ ಪಕ್ಷಗಳ ಚಿಹ್ನೆ ಮುಂದಿಟ್ಟುಕೊಂಡು ಹೋಗಬಹುದು, ಒಬ್ಬ ವ್ಯಕ್ತಿ ಯಾವುದೋ ಒಂದು ಪಕ್ಷದ ವಿಚಾರ ಧಾರೆಗೆ ಅಂಟಿಕೊಂಡಿರುತ್ತಾನೆ, ಆದುದರಿಂದ ಪಕ್ಷದ ವಿಚಾರ ಇಟ್ಟುಕೊಂಡು ಹೋದರೆ ತಪ್ಪಾಗುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ಬಹುಮತದ ಅಭಿಪ್ರಾಯ ಈ ಶಾಸನ ಸಭೆಯಲ್ಲಿ ಬೇರೆ ರೂಪದಲ್ಲಿ ಬಂದಿತು. ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷದ ಹೆಸರನ್ನು ಚುನಾವಣೆಗೆ ಉಪಯೋಗಿಸುವುದು ಬೇಡ, ಇದು ಒಳ್ಳೆಯದಲ್ಲ ಎಂಬ ಅಭಿಪ್ರಾಯ ಬಂತು. ಅದಕ್ಕಾಗಿ ಸ್ಥಳೀಯ ಸಂಸ್ಥೆಗಳು ಎಂದರೆ ಜಿಲ್ಲಾ ಪರಿಷತ್ ಕೂಡ ಸೇರುತ್ತದೆ, ಇದು ಎಲ್ಲರೂ ಕೂಡಾ ಒಪ್ಪಿರತಕ್ಕ ವಿಚಾರ. ವಿಧಾನಸಭೆ ಹಾಗೂ ವಿಧಾನಸಭೆಯ ಚುನಾವಣೆಗಿಂತ ಮೇಲೆ ಇರತಕ್ಕ ಚುನಾವಣೆಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲ. ಇವುಗಳು ರಾಜ್ಯಾಂಗ ಬದ್ಧವಾಗಿ ಬಂದಿರತಕ್ಕಂಥ ಸಂಸ್ಥೆಗಳು. ಇವೆಲ್ಲಾ ಇರತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ಇಟ್ಟುಕೊಂಡಿದ್ದೇವೆ. ಸ್ಥಳೀಯ ಸಂಸ್ಥೆಗಳ ಅಂದರೆ ಕಾರ್ಪೊರೇಷನ್, ಮುನಿಸಿಪಾಲಿಟಿಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಪಂಚಾಯತ್‌ಗಳು ಹಿಂದೆ ಇದ್ದವು, ಈಗ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳು ಇವೆ. ಈಗ ವಿಚಾರ ಮಾಡಿದರೆ, ನಾವು ಫೋರ್ ಟೈರ್ ಸಿಸ್ಟಂ ಇಟ್ಟುಕೊಂಡಿದ್ದೇವೆ. ಡೆಲ್ಲಿ, ಬೆಂಗಳೂರು, ಜಿಲ್ಲೆ ಮತ್ತು ಗ್ರಾಮಮಟ್ಟ.

ಅಧ್ಯಕ್ಷರು.—ತಾಲ್ಲೂಕ ಪಂಚಾಯತ್ ಸಮಿತಿಗಳನ್ನು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗ ತಾಲ್ಲೂಕು ಸಮಿತಿಗಳ ಪರಿಸ್ಥಿತಿ ಏನಿದೆ ಎಂಬುದು ತಮಗೆ ಗೊತ್ತಿದೆ. ನನ್ನ ಪ್ರಕಾರ ಅವು ಕೆಲಸಕ್ಕೆ ಬರದವು. ಇವರ ಪ್ರಕಾರ ಈಗ ಫೋರ್ ಟಯರ್

ಸಿಸ್ಟಮ್ ಇದೆ. ನಾಲ್ಕು ಹಂತಗಳನ್ನು ಉಳ್ಳಂಥ ವಿಚಾರಧಾರೆ ಇದೆ. ಅಧಿಕಾರ ವಿಕೇಂದ್ರೀಕರಣದ ವಾದ ಇದರಲ್ಲಿ ಅಡಗಿದೆ. ಡಿಸೆಂಟ್ರಲೈಸೇಷನ್ ಆಫ್ ಪವರ್, Decentralisation of powers where powers are centralised you are going to decentralise the powers, ಇದು ನಿಮ್ಮ ವಿಚಾರಧಾರೆ ಎಂಬ ಮಾತನ್ನು ಯಾರೂ ಕೂಡಾ ಅಲ್ಲಗಳೆಯುವುದಿಲ್ಲ. ಹಿಂದೆ ಈ ವಿಧೇಯಕ ಚರ್ಚೆಗೆ ಬಂದಾಗ ಹೆಚ್ಚಿನ ಪ್ರಮಾಣದಲ್ಲಿ ಇದು ನಮ್ಮ ಸಮಾಜಕ್ಕೆ ಒಳ್ಳೆಯದಲ್ಲ, ಅಧಿಕಾರ ವಿಕೇಂದ್ರೀಕರಣಕ್ಕೆ ಒಳಪಡಬೇಕಾದುದು ಒಳ್ಳೆಯದು ಎಂದು ಮೂಲಭೂತವಾಗಿ ನಾವೆಲ್ಲಾ ಒಪ್ಪಿಕೊಂಡೆವು. ಜೊತೆಗೆ ತಾವು ಹೇಳಿದ್ದೀರಿ, ಮೊನ್ನೆ ನಡೆದಂಥ ಚುನಾವಣೆಗಳ ವಿಚಾರ. ಅದನ್ನು ನಾನು ಗೌರ್ನರ್ ಅಡ್ರೆಸ್‌ಗೆ ಬಂದಾಗ ವಿವರವಾಗಿ ಮಾತನಾಡಬೇಕೆಂದು ಇಟ್ಟುಕೊಂಡಿದ್ದೇವೆ, ಆ ವಿಚಾರ ಒಂದುಕಡೆಗೆ ಇರಲಿ. ತಾವು ಹೇಳಿದ್ದೀರಿ ಇಡೀ ರಾಷ್ಟ್ರದಲ್ಲಿ ಪ್ರಥಮ ಎಂದು, ನಿಮ್ಮ ಭಿತ್ತಿಪತ್ರಗಳನ್ನು ಗೋಡೆಯ ಮೇಲೆ ಓದಿ ನೋಡಿದೆ. ಚುನಾವಣೆಯ ಕಾಲದಲ್ಲಿ ನಾನು ತಮ್ಮ ಭಿತ್ತಿಪತ್ರಗಳನ್ನು ನೋಡಿದ್ದೇನೆ. ಅದರಲ್ಲಿ ಏನಿದೇ ಎಂದರೆ ಈ ರಾಷ್ಟ್ರದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿರುವಂತಹ ರಾಜ್ಯ ನಮ್ಮ ಕರ್ನಾಟಕ ರಾಜ್ಯ. ಜನತೆಯ ಕೈಗೆ ಜನತಾ ಅಧಿಕಾರ, ನಿಮ್ಮ ಕೈಗೆ ನಿಮ್ಮ ಅಧಿಕಾರ ಎನ್ನುವ ಮಾತುಗಳನ್ನು ತಾವು ಹೇಳಿದ್ದೀರಿ. ಆದರೆ ನಾವು ಚುನಾವಣೆಯ ಪ್ರಚಾರ ಕಾರ್ಯಕ್ಕೆ ಹೋದ ಕಡೆಗಳಲ್ಲಿ ಇದು ನೈಜವಾದ ಸಂಗತಿಯಲ್ಲ. ಇದು ನಿಜವಾದ ಸಂಗತಿಯಲ್ಲ ಎನ್ನುವ ಮಾತನ್ನು ಜನತೆಗೆ ಸ್ಪಷ್ಟಪಡಿಸಿದ್ದೇವೆ. ಪ್ರಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರೀಕರಣ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಏನು ಹೇಳಿದ್ದಾರೋ ಅದು ಸರಿಯಾದುದು ಅಲ್ಲವೆಂದು ನಾವು ಸಹ ಹೇಳಿದ್ದೇವೆ. ಇಂತಹ ಒಂದು ಪ್ರಯೋಗವನ್ನು ಈ ಹಿಂದೆಯೇ ಕಾಂಗ್ರೆಸ್ ಪಕ್ಷ ಮಾಡಿದೆ ಎನ್ನುವ ವಾದವನ್ನು ಸಹ ಜನತೆಯ ಮುಂದೆ ಇಟ್ಟಿದ್ದೇವೆ. ಹಿಂದೆ ಇದ್ದಂತಹ ರೂಪರೇಖೆಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಈಗ ಇವರು ಈ ಅಧಿಕಾರ ವಿಕೇಂದ್ರೀಕರಣದ ಮಾತನ್ನು ಹೇಳುತ್ತಿದ್ದಾರೆನ್ನುವ ವಾದವನ್ನು ಸಹ ಜನತೆಯ ಮುಂದೆ ನಾವು ಇಟ್ಟಿದ್ದೆವು. ಇದು ಜನತಾ ಪಕ್ಷ ಮೊಟ್ಟ ಮೊದಲನೇಯ ಬಾರಿಗೆ ಮಾಡಿದ್ದು ಅಲ್ಲ. ಹಿಂದೆ ಮಾಡಿದ್ದ ಕಾನೂನಿನಲ್ಲಿ ಬಹುಮತವಿರುವ ಪಕ್ಷ ಅಂದರೆ ಜನತಾ ಪಕ್ಷ ಕೆಲವು ಕಲಂಗಳನ್ನು ಬದಲಾವಣೆ ಮಾಡಿ ಪುನರಾವರ್ತನೆ ಮಾಡಿದೆಯಷ್ಟೇ ಎನ್ನುವ ಮಾತನ್ನು ಸಹ ನಾವು ಜನತೆಯ ಮುಂದೆ ಇಟ್ಟಿದ್ದೇವೆ. ಆದರೆ ಈ ಒಂದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಚುನಾವಣೆಗಳನ್ನು ಮಾಡಿದ್ದರಿಂದ ಆಗಿರುವಂತಹ ಅನಾಹುತಗಳನ್ನು ತಾವೇ ಕಣ್ಣಾರೆ ಕಂಡಿದ್ದೀರಿ. ಇದಕ್ಕೆಲ್ಲಾ ಹೊಣೆಗಾರರು ನೀವೇ ಹೊರತು ನಾವಲ್ಲ. ಚುನಾವಣೆಗಳಲ್ಲಿ ಪಕ್ಷಗಳ ಚಿಹ್ನೆಗಳಿಂದ ಆಗಿರುವಂತಹ ಕೊಲೆಗಳೆಷ್ಟು? ದೊಂಬಿಗಳೆಷ್ಟು? ಇವೆಲ್ಲವುಗಳ ಜೊತೆಗೆ ಹೆಂಡ, ಖಂಡ, ಹಣ ದೊಡ್ಡ ಪ್ರಮಾಣದಲ್ಲಿ ನಡೆದಿವೆ. ಆ ವಿಚಾರಗಳನ್ನು ನಾನು ಈಗ ಪ್ರಸ್ತಾಪ ಮಾಡುವುದಿಲ್ಲ. ಅದಕ್ಕೆ ಪ್ರತ್ಯೇಕವಾದ ಸಮಯವಿದೆ. ಆಗ ನಾನು ಆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಇವತ್ತು ಗ್ರಾಮಸಭೆಗಳ ಜನತೆಯ ಜೀವನ ಮಟ್ಟ ಯಾವ ರೀತಿ ಇದೆ. ಪಟ್ಟಣಗಳಲ್ಲಿ ವಾಸ ಮಾಡುವಂತಹ ಜನತೆಯ ಜೀವನ ಮಟ್ಟ ಯಾವ ರೀತಿಯಲ್ಲಿ ಇದೆ. ಎನ್ನುವುದನ್ನು ನಾವೆಲ್ಲಾ ಚೆನ್ನಾಗಿ ತಿಳಿದುಕೊಂಡಿರತಕ್ಕಂಥ ಜನ. ಕಾರಣವೇನೆಂದರೆ ಇಲ್ಲಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರು ಗ್ರಾಮ ಮಟ್ಟದಿಂದ ಬಂದಿರತಕ್ಕಂಥ ಜನ. ಗ್ರಾಮ ಜೀವನದಿಂದ ಬಂದಿರತಕ್ಕಂಥ ಜನ. ಅದೇ ಪಟ್ಟಣದಲ್ಲಿ ಜೀವನ ಮಾಡುವಂತಹ ಜನರ ಪರಿಸ್ಥಿತಿಯೇ ಬೇರೆ. ಪಟ್ಟಣಗಳಲ್ಲಿ ವಾಸ ಮಾಡುವಂತಹ ಜನ ಬೆಳಿಗ್ಗೆ ಎದ್ದ ತಕ್ಷಣ ಕಾರಿನಲ್ಲಿಯೋ ಅಥವಾ ಸ್ಕೂಟರ್‌ನಲ್ಲಿ ಅಥವಾ ಮೊಪೆಡ್‌ಗಳಲ್ಲಿ ಅಥವಾ ಸೈಕಲ್‌ಗಳಲ್ಲಿ ಕಛೇರಿಗೆ ಬಂದು ಸಾಯಂಕಾಲದವರೆವಿಗೆ ಕೆಲಸ ಮಾಡಿ ಮನೆಗೆ ಹೋಗುತ್ತಾರೆ. ಆದರೆ ಗ್ರಾಮ ಮಟ್ಟದ ಜೀವನ ಆ ರೀತಿಯಲ್ಲ. ಇವತ್ತು ಪಟ್ಟಣ ಪ್ರದೇಶದಲ್ಲಿ ಓಟಿಂಗ್ ಪರ್ಸೆಂಟೇಜ್ ಬಹಳ ಕಡಿಮೆ ಇರುತ್ತದೆ. ಗ್ರಾಮ ಮಟ್ಟದಲ್ಲಿ ಓಟಿಂಗ್ ಪರ್ಸೆಂಟೇಜ್ ಬಹಳ ಜಾಸ್ತಿ ಇರುತ್ತದೆ. ಪಟ್ಟಣಗಳಲ್ಲಿ ಓಟಿಂಗ್ ದಿವಸ ರಜೆ ಇರುತ್ತದೆ. ಆ ದಿವಸ ಆರಾಮವಾಗಿ ಕಾಲ ಕಳೆಯುತ್ತಾರೆ. ಎಲ್ಲರೂ ಆ ರೀತಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಯಾರೋ ಕೆಲವರು ಆ ರೀತಿ ಮಾಡಬಹುದು. ಈಗ ಸಾಮಾನ್ಯವಾಗಿ ನಾವೆಲ್ಲಾ ನೋಡುತ್ತಿರುವ ಹಾಗೆ ಯಾವುದಾದರೂ ರಜೆ ಬಂದರೆ ಸರ್ಕಾರಿ ನೌಕರರು ಯಾವುದಾದರೂ ಪಿಚ್ಚರ್‌ಗೆ ಹೋಗುತ್ತಾರೆ. ಆರಾಮವಾಗಿ ಕಾಲ ಕಳೆಯುತ್ತಾರೆ. ಆದರೆ ಗ್ರಾಮ ಮಟ್ಟದಲ್ಲಿ ಆ ಪರಿಸ್ಥಿತಿಯಿಲ್ಲ. ಅಲ್ಲಿ ಓಟಿಂಗ್ ದಿವಸ ಬಂತೆಂದರೆ ಪ್ರತಿಯೊಬ್ಬರೂ ಸಹ ಒಂದೊಂದು ಚಿಹ್ನೆಯನ್ನು ಹಿಡಿದುಕೊಂಡು ತಮ್ಮದೇ ಆದ ಧಾಟಿಯಲ್ಲಿ ಚುನಾವಣಾ ಪ್ರಚಾರ ಮಾಡುತ್ತಾರೆ. ಮಾನ್ಯ ಸಭಾಧ್ಯಕ್ಷರೇ ತಮ್ಮ ಹಿರೇಕೆರೂರಿನಲ್ಲಿ ತಾವೇ ನೋಡಿದ್ದೀರಿ. ಸೊರಬದಲ್ಲಿ ನಾನು ನೋಡಿದ್ದೇನೆ. ಅವರು ಬಹಳ ಸೀರಿಯಸ್ ಆಗಿ ಕೆಲಸ ಮಾಡುತ್ತಿರುತ್ತಾರೆ. ಹಳ್ಳಿಗಳಲ್ಲಿ ಬೆಳಕು ಆಯಿತೆಂದರೆ

ಅವರ ನೇಗಿಲು ಇವರಿಗೆ ಕೊಡಬೇಕು. ಇವರ ಮನೆಯ ಎತ್ತು ಅವರಿಗೆ ಕೊಡಬೇಕು. ಇಲ್ಲದಿದ್ದರೆ ವ್ಯವಹಾರ ನಡೆಯುವುದಿಲ್ಲ. ಇವರ ಮನೆ ಎತ್ತು ಹೋಗಿ ಅವರ ಹೊಲದ ಜೋಳ ತಿನ್ನುತ್ತಿರುತ್ತದೆ. ಅವರ ಎತ್ತು ಬಂದು ಇವರ ಹೊಲದ ಜೋಳ ತಿನ್ನುತ್ತಿರುತ್ತದೆ.

ಇದು ದೈನಂದಿನ ಜನ ಜೀವನದಲ್ಲಿ ನೋಡತಕ್ಕಂಥ ವಿಚಾರಧಾರೆಗಳು. ಇದರ ಬಗ್ಗೆ ನನಗೆ ತಡೆಯುವುದಕ್ಕಾಗದೇ ಒಂದು ಪತ್ರಿಕಾ ಪ್ರಕಟಣೆಯನ್ನು ಕೊಟ್ಟುಬಿಟ್ಟೆ. ಇದರಿಂದ ಇವತ್ತು ಹಳ್ಳಿಗಳಲ್ಲಿ ಏನಾಗಿದೆ ಎಂದರೆ, ಯಾರಿಗೆ ರಾಜಕೀಯ ಬೇಡವಾಗಿತ್ತೋ ಅವರಿಗೆ ರಾಜಕೀಯದ ಮನಸ್ಸು ಬಂದಿದೆ. ಮನೆ ಮನೆಯಲ್ಲಿ ಈ ಚುನಾವಣೆಯಿಂದ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ. ಮನೆಯಲ್ಲಿ ಇರುವವರಿಗೆಲ್ಲಾ ಜಗಳ ಅಂಟಿಕೊಂಡಿದೆ. ಅತ್ತಿಗೆ, ಮಾವ, ಅಳಿಯ, ಮಗ, ಅಪ್ಪ ಅವ್ವ ಇವರುಗಳೆಲ್ಲರೂ ವಿರುದ್ಧವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಹಿಂದೆ ಈ ರೀತಿ ಇರಲಿಲ್ಲವೇ ಎಂದು ತಾವು ಕೇಳಬಹುದು. ಇತ್ತು. ಆದರೆ ಈ ಪ್ರಮಾಣದಲ್ಲಿ ಇರಲಿಲ್ಲ. ನಾವು ಪಕ್ಷಾತೀತವಾಗಿ ಚುನಾವಣೆಯನ್ನು ಹಿಂದೆ ನಡೆಸುತ್ತಿದ್ದೆವು. ಚುನಾವಣೆಯ ಅಭ್ಯರ್ಥಿಗಳಿಗೆ, ಆನೆ, ಸೈಕಲ್ಲು, ಸೂರ್ಯ, ಏಣಿ, ಮನುಷ್ಯ ಮುಂತಾದ ಪಕ್ಷಾತೀತ ಚಿನ್ಹೆಗಳನ್ನು ಕೊಡುತ್ತಿದ್ದೆವು. ನನ್ನ ಪ್ರಕಾರ ಆಗ ಎಲ್ಲರೂ ಪಕ್ಷೇತರರೇ ಆಗಿರುತ್ತಿದ್ದರು. ಜಿಲ್ಲಾ ಪರಿಷತ್ತಿನ ಚುನಾವಣೆಗೆ ಪಕ್ಷದ ಚಿನ್ಹೆಗಳನ್ನು ಕೊಟ್ಟಿದ್ದೀರಿ. ಅದನ್ನು ನಾವು ಬೇಡ ಎನ್ನುವುದಿಲ್ಲ. ಆದರೆ ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಚಿನ್ಹೆಯನ್ನು ಕೊಟ್ಟು ಪ್ರತಿ ಹಳ್ಳಿಯ ಜನರಲ್ಲೂ ರಾಜಕೀಯ ತುಂಬುವ ಹಾಗೆ ಮಾಡಿದ್ದೀರಿ. ನಿಜವಾಗಿ ಹೇಳಬೇಕೆಂದರೆ, ಪ್ರತಿ ತಾಲ್ಲೂಕಿನಲ್ಲೂ ಬೆಂಕಿ ಮಾತ್ರ ಬಿದ್ದಿಲ್ಲ. ಹಾಗೆಯೇ ದಹದಹಿಸಿ ಉರಿಯುತ್ತಿದೆ. ಒಳಗೊಳಗೇ ಉರಿದು ಯಾವ ಹೊತ್ತಿಗೆ ಏನಾಗುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಕೆಲವು ಕಡೆ ಆದ ಗಲಾಟೆಯನ್ನು ಹತೋಟಿಗೆ ತರಲು ನಿಮ್ಮ ಸರ್ಕಾರದಿಂದಲೇ ಆಗಿಲ್ಲದಿರುವುದೂ ತಮಗೆ ಗೊತ್ತಿದೆ. ಈಗ ತಾನೇ ನಮ್ಮ ಒಬ್ಬ ಮುಸ್ಲಿಮ್ ಮಹಿಳೆಯ ಮರ್ಡರ್ ಆಗಿರುವ ವಿಷಯವನ್ನು ಟೆಲಿಗ್ರಾಮ್‌ ಕೊಟ್ಟು ನಮಗೆ ತಿಳಿಸಿದ್ದಾರೆ. ಹೊಳೆಹೊನ್ನೂರು ತಾಲ್ಲೂಕು, ಇದು ಶಿವಮೊಗ್ಗ ಜಿಲ್ಲೆಯಲ್ಲಿ ಇದೆ. ಈ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪರ ಪ್ರಚಾರ ಮಾಡಿದ ಒಬ್ಬ ಮುಸ್ಲಿಂ ಮಹಿಳೆಯನ್ನು, ಅವಳ ಹೆಸರು ನೂರ್ ಜಹ ಮರ್ಡರ್ ಮಾಡಲಾಗಿದೆ. ಈ ವಿಷಯವನ್ನು ಅವರು ತಡೆಯಲಿಕ್ಕಾಗದೇ ನಮಗೆ ಟೆಲಿಗ್ರಾಮ್ ಮೂಲಕ ತಿಳಿಸಿದ್ದಾರೆ. ಇದಕ್ಕೆ ಯಾರು ಕಾರಣ ಎಂಬುದನ್ನು ತಿಳಿಯುವುದಕ್ಕೆ ವಿಚಾರಣೆ ನಡೆಯುತ್ತದೆ. ಅದು ಬೇರೆ ವಿಷಯ. ಆದರೆ ಒಬ್ಬ ಹೆಣ್ಣುಮಗಳು ಈ ಚುನಾವಣಾ ಪ್ರಚಾರ ಮಾಡಿದ್ದಕ್ಕಾಗಿ ಸತ್ತಳಲ್ಲಾ ಅದಕ್ಕೆ ಯಾರು ಹೊಣೆ ? ಈ ಹೊಳೆ ಹೊನ್ನೂರು ಬಹುಶಃ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರ ಕ್ಷೇತ್ರಕ್ಕೆ ಹತ್ತಿರವಾಗಬಹುದೆಂದು ಕಾಣುತ್ತದೆ. ಈ ಕ್ಷೇತ್ರದ ಪ್ರತಿನಿಧಿ ಮಾನ್ಯ ಸಚಿವರಾದ ಬಸವಣ್ಣಪ್ಪನವರು ಆಗಿದ್ದಾರೆ. ಈ ರೀತಿ ಕೊಲೆಗಳಾಗುವುದಕ್ಕೆ ಈ ಮಂಡಲ ಪಂಚಾಯಿತಿ ಚುನಾವಣೆ ಕಾರಣವಾಗಿದೆ. ಇದೇ ತರದ ಗಲಾಟೆಗಳು, ಕೊಲೆಗಳು, ಇತರ ಕಡೆಯೂ ನಡೆದಿವೆ. ಬಳ್ಳಾರಿಯಲ್ಲೂ ನಡೆದಿದೆ. ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತೇನೆಂದರೆ, ಗ್ರಾಮೀಣ ಜನರು ಈ ಮೊದಲು ಸೌಹಾರ್ದಯುತವಾಗಿ ಬಾಳುತ್ತಿದ್ದರು ಈ ಚುನಾವಣೆ ಬಂದಮೇಲೆ ಒಬ್ಬರಿಗೊಬ್ಬರಿಗೆ ಆಗುತ್ತಿಲ್ಲ. ಪಕ್ಷಗಳ ಹೆಸರನ್ನು ಹೇಳಿಕೊಂಡು ಶಾಂತಿಯೆಲ್ಲಾ ಹದಗೆಟ್ಟು ಹೋಗಿದೆ. ಅಷ್ಟೇ ಅಲ್ಲ ಬೆಂಕಿ ಹತ್ತಿ ದಹದಹಿಸಿ ಉರಿಯುತ್ತಿದೆ. ಅದಕ್ಕೆ ಕಾರಣ, ಮಂಡಲ ಪಂಚಾಯಿತಿಗೆ ಪಕ್ಷದ ಚಿನ್ಹೆ ಕೊಟ್ಟಿರುವುದೇ ಆಗಿದೆ. ಇದು ಮಂಡಲ ಪಂಚಾಯಿತಿಗೆ ಮಾತ್ರ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ. ಜಿಲ್ಲಾ ಪರಿಷತ್‌ಗೆ ಪಕ್ಷದ ಚಿನ್ಹೆಯನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಜಿಲ್ಲಾ ಪರಿಷತ್ ಚುನಾವಣೆಗೆ ಪಕ್ಷದ ಚಿನ್ಹೆಯನ್ನು ಕೊಡಬೇಡಿ ಎಂದು ನಾನು ಅನ್ನುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ. – ಮದುವೆ ಆಗಿಹೋಗಿದೆ. ತಾಳಿ ಕಟ್ಟಿದ್ದನ್ನು ಕಿತ್ತು ಹಾಕುವುದಕ್ಕಾಗುವುದಿಲ್ಲ ಏನು ಮಾಡುವುದು ?

ಅಧ್ಯಕ್ಷರು.—ಹೆಮ್ಮಿಗೆಯವರೇ ತಾವು ಕುಳಿತುಕೊಳ್ಳಿ. ನಿಮಗೂ ಅವಕಾಶ ಕೊಡುತ್ತೇನೆ. ಇಂಟರ್‌ಫಿಯರೆನ್ಸ್ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇನ್ನು ಎಂತೆಂತಹ ವಿಚಾರ ಘಟಿಸಬೇಕೆಂದು ನನ್ನ ಸಲಹೆ ಹಾಗು ನನ್ನ ಸ್ಪಷ್ಟವಾದ ಅಭಿಪ್ರಾಯ. ಇನ್ನು ಆಮೇಲೆ, ಹಣ ಹೆಂಡ ಹಂಚುವ ಬಗ್ಗೆ ಬರುತ್ತೇನೆ. ಇವರು ಪಕ್ಷಾಂತರ ನಿಷೇಧ ಮಾಡುತ್ತೇವೆಂದು ಹೇಳಿದ್ದಾರೆ ಏನು ನಿಷೇಧ ಆಗುತ್ತದೆಯೋ ? ನಿಮ್ಮ ಹಣೆಬರಹ ನಿಷೇಧ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹಣೇಬರಹದಲ್ಲಿ ಆಗುವುದಿಲ್ಲ. ಮೊನ್ನೆ ಚುನಾವಣೆಯಲ್ಲಿ ಏನಾಗಿದೆ ? ಹೆಂಡ, ಖಂಡ, ಹಣವನ್ನು ಚೆಲ್ಲಿದ್ದೀರಿ. ಇದು ಹಿಂದೆಯೂ ಕೂಡ ನಡೆಯುತ್ತಿತ್ತು ಎನ್ನತಕ್ಕಂಥ ಅಭಿಪ್ರಾಯ ಈ ಸದನದಲ್ಲಿ ನಾವು ಕೇಳಿದ್ದೇವೆ. ಎಲ್ಲೋ ಒಂದು ಸಾರಿ ನಡೆಯುತ್ತಿತ್ತು ಎನ್ನತಕ್ಕಂಥ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸುತ್ತಾ ಇದ್ದರು. ಆದರೆ ನಿಮ್ಮ ಕಾಲದಲ್ಲಿ ಹೆಂಡ, ಖಂಡ, ಬಟ್ಟೆ, ಮತ್ತು ಹಣವನ್ನು ಅಷ್ಟೇ ಅಲ್ಲದೇ ಅಕ್ಕಿಯನ್ನು ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಂಚಿದ್ದಾರೆ ಎಂಬುದನ್ನು ಕೇಳಿದ್ದೇವೆ.

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಅವರು ಹಂಚಿದ್ದಾರೆ ಎಂದು ಹೇಳಿದರೆ ಅವರು ನೀವು ಹಂಚಿದ್ದೀರಿ ಎಂದು ಹೇಳುತ್ತಾರೆ. ವಿಷಯಕ್ಕೆ ದಯವಿಟ್ಟು ಬನ್ನಿ......

ಶ್ರೀ ಎಸ್. ಬಂಗಾರಪ್ಪ.—ಪಕ್ಷಾಂತರ ನಿಷೇದಕ್ಕೆ ಸಂಬಂಧಪಟ್ಟಂತೆ ನಾನು ಪ್ರಸ್ತಾಪ ಮಾಡುತ್ತೇನೆ. ಈ ವಿಷಯದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ವಿವರವಾಗಿ ಮಾತನಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ಜಿಲ್ಲಾ ಪರಿಷತ್ ಚುನಾವಣೆ ಸಮಯದಲ್ಲಿ ಹಂಚಿಲ್ಲ ಮಂಡಲ್ ಪಂಚಾಯತ್ ಸಮಯದಲ್ಲಿ ಹಂಚಿದ್ದಾರೆ...

ಅಧ್ಯಕ್ಷರು.—ಬಂಗಾರಪ್ಪನವರು ೨೩ ನಿಮಿಷಗಳಿಂದ ಮಾತನಾಡುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ನೀಲಕಂಠಪ್ಪನವರೇ, ನೀವು ತರೀಕೆರೆಯಲ್ಲಿ ಇನ್ನೂ ಮೆಂಬರ್ ಆಗಿ ಇರಬೇಕು. ಅದಕ್ಕೆ ನನ್ನ ಅಭ್ಯಂತರವಿಲ್ಲ. ನಿಮಗೆ ಇನ್ನೂ ಚಿಕ್ಕ ವಯಸ್ಸು. ನೀವು ನಿಮ್ಮ ೧೫೦ನೇ ವಯಸ್ಸಿನ ವರೆಗೆ ಮೆಂಬರ್ ಆಗಿರಿ ಎಂದು ನಾನು ಆಶಿಸುತ್ತೇನೆ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಬಂಗಾರಪ್ಪನವರು ವರ ಕೊಡುತ್ತಿದ್ದಾರೆ.

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಬಂಗಾರಪ್ಪನವರು ಮುಂದುವರಿಸಿ.

ಶ್ರೀ ಎಸ್. ಬಂಗಾರಪ್ಪ.—ಚುನಾವಣೆಯಲ್ಲಿ ಯಾರು ಸೋಲುತ್ತಾರೆ, ಯಾರು ಗೆಲ್ಲುತ್ತಾರೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಆದರೆ ಯಾರು ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನು ಗಮನಿಸಬೇಕಾಗುತ್ತದೆ ಪ್ರಜಾಪ್ರಭುತ್ವವನ್ನು ಚಾಚೂ ತಪ್ಪದೇ, ಕಣ್ಣಲ್ಲಿ ಎಣ್ಣೆ ಹಚ್ಚಿಕೊಂಡು ಕಾಯಬೇಕು. ಆದರೆ ನೀವು ಆ ತತ್ವವನ್ನು ಕಾಯದೇ ಈ ಚುನಾವಣೆಯಲ್ಲಿ ಪಕ್ಷಾಂತರ ನಿಷೇದ ತರುತ್ತಾ ಇದ್ದೀರಿ. ಒಬ್ಬ ವ್ಯಕ್ತಿ ತನ್ನ ಕ್ಷೇತ್ರದ ಮತದಾರರಿಂದ ಮತಗಳನ್ನು ಪಡೆದು, ಅನಂತರ ಒಂದು ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗಬಾರದು ಎನ್ನತಕ್ಕಂಥಾದ್ದು. ಜನತೆಯ ತೀರ್ಪಿನ ಪ್ರಕಾರ ಬಹುಮತ ಪಡೆದ ಮೇಲೆ, ಕಾನೂನು ಪ್ರಕಾರ ಅದನ್ನು ತಪ್ಪಿಸುವುದಕ್ಕೆ ಬರುವುದಿಲ್ಲ. ಅದು ಸಾಧ್ಯವೇ ಇಲ್ಲ ಎನ್ನತಕ್ಕಂಥ ಅಭಿಪ್ರಾಯಕ್ಕೆ ನಾನು ಹೋಗುವುದಿಲ್ಲ. ನಾನು ಸ್ವಾಗತ ಮಾಡುತ್ತೇನೆ, ಇಲ್ಲಿ ನಮ್ಮ ಮುಂದಿರತಕ್ಕಂಥ ಪ್ರಶ್ನೆ, ಅವನು ಗೆಲ್ಲಬೇಕಾದರೆ, ಖಂಡ, ಹಣ, ಹೆಂಡ ಅಕ್ಕಿ, ಹೀಗೆ ಎಲ್ಲವನ್ನೂ ಕೊಟ್ಟು ಆರಿಸಿ ಬಂದವನು ಇನ್ನು ಯಾವ ನೀತಿಯನ್ನು ಪರಿಪಾಲನೆ ಮಾಡಬೇಕಾಗುತ್ತದೆ ? ಇವೊತ್ತು ಕಾನೂನು ಇದೆ, ''ಲಂಚ ಕೊಡಬಾರದು-ಎಂದು. ಆದರೆ ಲಂಚವನ್ನು ಕೊಡುತ್ತಾ ಇದ್ದಾರೆ. ಇವೊತ್ತು ಲಂಚ ತಿನ್ನಬಾರದು ಎಂದು ಕಾನೂನು ಇದೆ, ಆದರೆ ಲಂಚ ತಿಂದು ತೇಗುತ್ತಾ ಇದ್ದಾರೆ. ಇದೆಲ್ಲಾ ಕಾನೂನಿನ ಪುಟ್ಟಿಗೆ ಮಾತ್ರ ಇದೆ. ಅಂತಹ ಪಟ್ಟಿಗೆ ಪುಸ್ತಕದ ಈ ಒಂದು ಕಾನೂನನ್ನು ಕೂಡ ಸೇರಿಸತಕ್ಕಂಥ ಒಂದು ಸಂದರ್ಭವನ್ನು ನೀವು ಸೃಷ್ಟಿ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ.

ಇಲ್ಲಿ ಜಿಲ್ಲಾಪರಿಷತ್ ಚುನಾವಣೆಯ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ನನ್ನ ತಾಲ್ಲೂಕಿನ ಒಂದು ಅನುಭವವನ್ನು ನಾನು ಹೇಳುತ್ತೇನೆ ನಿಮ್ಮ ಅನುಭವವನ್ನು ನೀವು ಹೇಳಿ, ನಾನು ೧೯೬೭ನೇ ಇಸವಿಯಿಂದಲೂ ಚುನಾವಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಆದರೆ ಈ ಒಂದು ಪರಿಸ್ಥಿತಿಗೆ ನಮ್ಮ ತಾಲ್ಲೂಕನ್ನು ನೀವು ತರುತ್ತಿದ್ದೀರಿ ಎಂದು ತಿಳಿದುಕೊಂಡಿರಲಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ. ಮಾನ್ಯ ಬಂಗಾರಪ್ಪನವರು ಚುನಾವಣೆ ಬಗ್ಗೆ ಏನಾದರೂ ಡಿಸ್ಪ್ಯೂಟ್ ಇದೆಯೋ ಎನ್ನುವ ಬಗ್ಗೆ ಮಾತನಾಡುವುದನ್ನು ಬಿಟ್ಟು ಹೆಂಡದ ಮೇಲೆ ಮಾತನಾಡುತ್ತಿದ್ದಾರೆ. ಹೆಂಡ, ಖಂಡ, ಹಣ, ಅಕ್ಕಿ, ಇತ್ಯಾದಿಯಾಗಿ ಏನೋ ಹೇಳುತ್ತಿದ್ದಾರೆ.

ಅಧ್ಯಕ್ಷರು.—ನೀಲಕಂಠಪ್ಪನವರು ಕುಳಿತುಕೊಳ್ಳ ಬೇಕು. ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಆಗ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಪಕ್ಷಾಂತರ ನಿಷೇದ ಮಾಡುವ ವಿಚಾರ ಸ್ವಾಗತಾರ್ಹ ವೆಂದು ನಾನು ಹೇಳುತ್ತಾ ಇದ್ದೆ. ಅದರ ಅಳಿವು ಉಳಿವು ನೀವು ಯಾವ ರೀತಿ ಚುನಾವಣೆ ನಡೆಸುತ್ತೀರಿ ಎನ್ನುವುದರ ಮೇಲೆ ನಿಂತಿದೆ. ಇಲ್ಲಿ ಚುನಾವಣೆಯಲ್ಲಿ ಅಕ್ರಮ ನಡೆದರೆ ಎಲೆಕ್ಷನ್ ಕಮಿಷನ್ ಆಫ್ ಇಂಡಿಯಾಕ್ಕೆ ಬರುವುದಿಲ್ಲ ಇಲ್ಲಿನ ನಿಮ್ಮ ಕಮಿಷನ್ ಇದೆ ಅದಕ್ಕೇ ಹೋಗಬೇಕು, ಆ ರೀತಿ ಎಷ್ಟು ಟೆಲಿಗ್ರಾಂಸ್ ಕಂಪ್ಲೇಂಟ್ಸ್ ಹೋಗಿಲ್ಲ ಬೇರೆ ಪಕ್ಷದವರು ನಮ್ಮ ಪಕ್ಷದವರು ಎಲ್ಲರೂ ಹೋಗಿದ್ದಾರೆ ಮಂಡಲ ಪಂಚಾಯಿತ್ತಿಯಲ್ಲಿ ಎಂಥಾ ಮೋಸ ಇವರು ನಡೆಸಿದ್ದಾರೆಂದರೆ ವೋಟ್ ಎಣಿಕೆಯ ಬಗ್ಗೆ ನಾನು ಪತ್ರಿಕೆಯಲ್ಲಿ ಹೇಳಿದ್ದೆ ಅದನ್ನು ಇವರು ಎನ್‌ಕ್ವಯರಿಗೆ ಹಾಕಿದ್ದಾರಂತೆ ನೋಡೋಣ ಏನು ಮಾಡುತ್ತಾರೋ ನಮ್ಮಲ್ಲಿ ಒಬ್ಬ ನಮ್ಮ ಪಕ್ಷದ ಅಭ್ಯರ್ಥಿ ಮಂಡಲ ಪಂಚಾಯಿತ್ತಿಯಲ್ಲಿ ೩೫ ವೋಟ್ ಹೆಚ್ಚಿಗೆ ತೆಗೆದುಕೊಂಡು ಚುನಾಯಿತ ಆಗಿಬಿಟ್ಟ. ಬಹುಮತದ ಮೇಲೆ ತಾನೇ ತೀರ್ಮಾನ ಆಗಬೇಕಾಗಿರುವುದು ಆದರೆ ಅಲ್ಲಿಗೆಂದು ಇವರು ನೇಮಿಸಿದ್ದ ತಹಸೀಲ್ದಾರ ಏನು ಮಾಡಿದರೂ ಅದನ್ನು ಒಪ್ಪುವುದಿಲ್ಲ ಅನೌನ್ಸ್ ಮಾಡುವುದಿಲ್ಲ. ಮಧ್ಯಾಹ್ನ ೨ ಗಂಟೆಗೆ ಕೌಂಟಿಂಗ್ ಮುಗಿದಿದೆ ಸರ್ಟಿಫಿಕೇಟ್ ಕೊಡುತ್ತಿಲ್ಲ. ಇಂತ ಅಭ್ಯರ್ಥಿ ಗೆದ್ದು ಎಂದು ಅದನ್ನು ಮೈಕ್‌ನಲ್ಲಿ ಅನೌನ್ಸ್ ಮಾಡಿ ಗೆಲುವಿನ ಸರ್ಟಿಫಿಕೇಟ್ ಕೊಡಬೇಕು ಕೊನೆಗೆ ಅವನ ಬಾಯಲ್ಲಿ ಮೈಕಿನ ಮೂಲಕ ಕಾಂಗ್ರೆಸ್ ಗೆದ್ದಿದೆ ಎಂದು ರಾತ್ರಿ ೧೧-೦೦ ಗಂಟೆಗೆ ಹೇಳಿಸಬೇಕಾದರೆ ತಿಪ್ಪರಲಾಗ ಹಾಕಬೇಕಾಯಿತು ಒಂದು ಸಲ ಗೆದ್ದರೆ ಮುಂದೆ ಒಳ್ಳೆ ತಳಹದಿ ಸಿಕ್ಕಂತಾಗುತ್ತದೆ ಎಂಬ ಆಡಳಿತ ಪಕ್ಷದ ತೀರ್ಮಾನವನ್ನು ಕೈತಿಗಳಿಸುವ ಭೂಪ ಅವನು ಆದರೆ ಅಧಿಕಾರಿಗಳಾದವರು ಹೀಗೆ ಪಾರ್ಟಿ ಪಾಲಿಟಿಕ್ಸ್ ಮಾಡಹೋದರೆ ಬೇರೊಂದು ಕಡೆ ಅವರೇ ಸಿಕ್ಕಿಹಾಕಿಕೊಳ್ಳುತ್ತಾರೆ.

ಜಿಲ್ಲಾಪರಿಷತ್ತಿನಲ್ಲಿ ಬಹಳ ನೀತಿಯಿಂದ ಚುನಾವಣೆ ಮಾಡುತ್ತೇವೆದರು ನಮ್ಮ ಸೊರಬ ತಾಲ್ಲೂಕಿನಲ್ಲಿ ನೀತಿಯಿಂದ ಕೊಡುವ ಮತದಾರರಿದ್ದಾರೆ. ಎಲ್ಲಿ ನೀತಿಗೆಟ್ಟ ರಾಜಕಾರಣ ಮಾಡುತ್ತಾರೋ ಅದು ಅನರ್ಹತೆಗೆ ಈಡಾಗುತ್ತದೆ. ಎಲ್ಲಿ ನೀತಿಬದ್ಧ ರಾಜಕಾರಣ ನಡೆಯುತ್ತದೋ ಅಲ್ಲಿ ಮರ್ಯಾದೆಯ ಅರ್ಹತೆ ಸಿಗುತ್ತದೆ. ಹೆಂಡ ಹಣದ ರಾಜಕಾರಣ ನಮ್ಮದಲ್ಲ, ನಮ್ಮ ಜನರು ಕೂಡ ಮಾಡುವವರಲ್ಲ: ಸ್ವಲ್ಪ ದಿವಸದ ಹಿಂದೆ ನಮ್ಮ ಆನವಟ್ಟಿ ಸುತ್ತ ಮುತ್ತ ಬರಗಾಲ ಬಂತು. ಅಲ್ಲಿನ ಬಡವರು ಕಾಫಿ ಸೀಮೆಗೆ ಹೋದರು. ಆಗ ಇವರು ಅದೆಲ್ಲಿಂದ ತಂದರೋ ಯಾವ ಕಥೆಯೋ ಗೊತ್ತಿಲ್ಲ, ಬರೀ ಸರಾಯಿ ಕೇಸುಗಳು, ಬ್ರಾಂದಿ ಕೇಸುಗಳು, ಅವನ್ನು ಬಡ ಜನರಿಗೆ ಕುಡಿಸಿ ಕುಡಿಸಿ ರೊಕ್ಕ ಕೊಟ್ಟೂ ಕೊಟ್ಟೂ ಏನಾದರೂ ಮಾಡಿ ಪಕ್ಷ ಗೆಲ್ಲಿಸಬೇಕೆಂಬ ಇಚ್ಛೆಯಿಂದ ಇವರು ಮಾಡಿದರು. ಇಡೀ ನನ್ನ ರಾಜಕೀಯ ಜೀವನದಲ್ಲಿ ಅಂಥ ಹಣ ಹೆಂಡದ ಹೊಳೆ ನೋಡಿರಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬಂಗಾರಪ್ಪನವರೇ ಹಾಗಾದರೆ ಮಂಡಲ ಪಂಚಾಯಿತಿಯಲ್ಲಿ ನೀವು ಅದನ್ನೆಲ್ಲ ಮಾಡಿ ಬಹುತ ಪಡೆದಿರಾ ?

ಶ್ರೀ ಎಂ. ಎಸ್. ಕೃಷ್ಣನ್.—ನಿಜ ಹೇಳುತ್ತೇನೆ ಇಬ್ಬರೂ ಅದನ್ನೇ ಮಾಡಿದ್ದು.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಜಿಲ್ಲಾ ಪರಿಷತ್ತಿನಲ್ಲಿ ನಿಮ್ಮ ಪಕ್ಷ ಬಹುಮತ ಪಡೆಯಿತು ಆಗ ನೀವು ಎಷ್ಟು ಹೆಚ್ಚು ಮಾಡಿದ್ದೀರಿ ಹೇಳಿ. ಆ ತೀರ್ಮಾನಕ್ಕೆ ನಾವು ಬರೋಣವೇ ಹೇಳಿ ನಾವು ರೆಡಿ ಇದ್ದೇವೆ,

ಶ್ರೀ ಅಬ್ದುಲ್ ನಜೀರ್ ಸಾಬ್.—ರಾಜಕೀಯ ಸಿದ್ಧಾಂತಗಳನ್ನು ವಿಶ್ಲೇಷಣೆ ಮಾಡುವಾಗ ಚೈತ್ಕಂಬ ಸಿದ್ಧಂತದ ಸಮಾಜವಾದಿಗಳಾದ ತಾವು ಅದೇ ಸಮಾಜವಾದವನ್ನು ನಂಬಿರುವ ನಮ್ಮ ಬಗ್ಗೆ ಮಾತಾಡುವಾಗ ಕೇವಲ ಹೆಂಡ ಹೊಳೆಗಳ ಪದವ್ಯಾಪ್ತಿಯಲ್ಲೇ ನಿಮ್ಮ ಭಾಷಣ ಸಾಗದಿರಲಿ ಎಂದು ನಾನು ಮಾತನಾಡಿದೆ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಯಾರೇ ಇರಲಿ ಡಾಕ್ಟರ್ ರಾಮ ಮನೋಹರಲೋಹಿಯಾರವರಿಂದ ಹಿಡಿದು ಜಯಪ್ರಕಾಶ್‌ನಾರಾಯಣ್‌ರವರೆಗೆ ನಮಗೂ ನಿಮಗೂ ಗೊತ್ತಿದೆ. ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಜನ ಜೀವನ ಹೇಗಿರಬೇಕು ಎಂದು............

ಅಧ್ಯಕ್ಷರು.—ಕುಡಿಯುವವರು ಕುಡಿಸುವವರು ಬಿಟ್ಟು ಬಿಡಿ. ವಿಷಯಕ್ಕೆ ಬನ್ನಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಪಕ್ಷಾಂತರ ನಿಷೇದ ನೇರವಾಗಿ ಇದಕ್ಕೆ ಸಂಭಂದವಿದೆ ಇಲ್ಲದಿದ್ದರೆ ನಾನೇಕೆ ಅದನ್ನು ಹೇಳುವುದಕ್ಕೆ ಹೋಗಲಿ. ಜಿಲ್ಲಾಪರಿಷತ್ ಎಲೆಕ್ಷನ್‌ನಲ್ಲಿ ಮತ ಚೀಟಿ ಕಟ್ಟು ಕಟ್ಟುಗಳನ್ನೇ ಮಾಡಿದ್ದಾರೆ ಓಟು ಅದರಲ್ಲಿ ಏನು ವ್ಯತ್ಯಾಸ ಮಾಡಿದ್ದಾರೆ ಎಂದು ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ. ನಿಜ ಹೇಳಬೇಕೆಂದರೆ ಈ ಎಲೆಕ್ಷನ್‌ಗಳಲ್ಲಿ ನಾನು ಪ್ರಚಾರಕ್ಕೆ ಹೋಗಿ ಓಟು ಕೇಳಲಿಲ್ಲ. ಜಿಲ್ಲಾ ಪರಿಷತ್ ಎಲೆಕ್ಷನ್‌ನಲ್ಲಿ ಐದು ಜಿಲ್ಲೆಯಲ್ಲಿ ನಾಲ್ಕು ಜಿಲ್ಲೆ ನಿಮಗೆ ಬಂತು ಒಂದು ಸೀಟು ನಮಗೆ ಬಂತು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ. ೧೦ ನಿಮಿಷಗಳಲ್ಲಿ ಮುಗಿಸಿ.

ಶ್ರೀ ವೇದಾಂತ ಹೆಮ್ಮಿಗೆ.—ಮಂಡಲ ಪಂಚಾಯಿತ್ತಿಯಲ್ಲಿ ಕುಡಿಯುವ ಬಗ್ಗೆ ಮಾತನಾಡು-ತ್ತಿದ್ದಾರೆ. ಕುಡಿಯುವಾಗ ಟೈಮ್ ಲಿಮಿಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕುಡಿಯುವ ವಿಚಾರದಲ್ಲಿ ನಿಮ್ಮ ಅಭಿಪ್ರಾಯ ಇದ್ದರೆ.........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಂಡಲ ಪಂಚಾಯಿತ್ತಿ ಚುನಾವಣೆಯಲ್ಲಿ ನಾವು ಹೋಗಲಿಲ್ಲ. ಜನ ಬೇಡವೆಂದು ಹೇಳುವುದಾದರೆ ನಾವು ಅಲ್ಲಿ ಇರಬಾರದು. ನೀವು ನಂಬಿದರೆ ನಂಬಿ ನಂಬದಿದ್ದರೆ ಬೇಡ ನಿಜ ಹೇಳಬೇಕೆಂದರೆ ಈ ೨೦ ವರ್ಷಗಳಿಂದ ನಿಮ್ಮ ತಾಲ್ಲೂಕಿನಲ್ಲಿ ಏನು ವಿಶ್ವಾಸವನ್ನು ಕಾಪಾಡಿಕೊಂಡು ಬಂದಿದ್ದೆವೋ ಅದನ್ನು ಸಂಪೂರ್ಣವಾಗಿ ಹಾಳು ಮಾಡಿರತಕ್ಕಂಥಾದ್ದು ಇದೆ. ನನ್ನ ತಾಲ್ಲೂಕಿನದು ಉದಾಹರಣೆ ಕೊಟ್ಟಿದ್ದೇನೆ. ಬೇರೊಂದು ತಾಲ್ಲೂಕಿನದು ಅಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ವ್ಯವಹಾರವನ್ನು ನೀವು ಮಾಡಿದ್ದೀರಿ ಇಡೀ ರಾಜ್ಯದ ೧೯ ಜಿಲ್ಲೆಗಳಲ್ಲೂ ಇಂತಹ ವ್ಯವಹಾರವನ್ನು ಮಾಡಿದ್ದೀರಿ ಪ್ರಜಾಪ್ರಭುತ್ವ ಅಧಿಕಾರ ವಿಕೇಂದ್ರೀಕರಣ ಎಂಬ ವಾದವನ್ನು ಇಟ್ಟುಕೊಂಡು ಜನರೇ ಕೈಗೆ ಆಡಳಿತವನು ಕೊಡುತ್ತೇವೆಂದು ಹೇಳಿದ್ದೀರಿ. ನೀವು ಇವತ್ತು ಬಹು ಮತದಿಂದ ಬಂದಿದ್ದರೆ ಅದು ನಿಮ್ಮ ಆಡಳಿತ ದೃಷ್ಟಿಯಿಂದಲ್ಲ ನಿಮ್ಮ ಹೆಂಡ ಸಾರಾಯಿ ಮತ್ತು ನಿಮ್ಮ ಹಣದ ಚೀಲ ಏನು ಇದೆ ಅವುನಿಮಗೆ ಅಧಿಕಾರವನ್ನು ಕೊಟ್ಟಿದೆಯೇ ವಿನಃ ನಿಮ್ಮ ನೀತಿ ಅಲ್ಲವೆಂದು ಸ್ಪಷ್ಟಪಡಿಸುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಜನರ ಪರಿಸ್ಥಿತಿ ಏನಾಗಿದೆ ಎಂದರೆ ಕುಡಿಯಲಾರದವನು ಕುಡಿದಿದ್ದಾನೆ ಕಡಿಮೆ ಕುಡಿದರಂತೂ ಅವನಿಗೆ ಮತ್ತಷ್ಟು ಕುಡಿಸಿ ಮಲಗಿಸಿ ಬಿಟ್ಟಿದ್ದೀರಿ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಅವರು ಅಮೆಂಡ್‌ಮೆಂಟ್ ಮೇಲೆ ಮಾತನಾಡುತ್ತಿದ್ದಾರೋ ಅಥವಾ ಬೇರೆ ವಿಷಯದ ಮೇಲೆ ಮಾತನಾಡುತ್ತಿದ್ದಾರೋ ಅವರು ವಿಷಯಾಂತರ ಮಾತನಾಡುತ್ತಿದ್ದಾರೆ. ಹೆಂಡ ಸಾರಾಯಿ ಇದರಲ್ಲಿ ಎಲ್ಲೂ ಇಲ್ಲ ಅವರಿಗೆ ಹೇಳಿ ಅಮೆಂಡ್ ಮೆಂಟ್ ಮೇಲೆ ಮಾತನಾಡುವುದಕ್ಕೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಹೆಂಡ ಸಾರಾಯಿ ಬಿಟ್ಟು ಬಿಡಿ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಬಿಟ್ಟು ಬಿಡುವುದಕ್ಕಾಗುವುದಿಲ್ಲ. ಈ ಹೆಂಡ ಸಾರಾಯಿ ಯಿಂದಲೇ ಇವತ್ತು ಬಂದಿರುವುದು.

ಅಧ್ಯಕ್ಷರು.—ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮತ್ತೆ ಅವರು ಸಹ ಅದನ್ನೇ ಶುರು ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ನಿಮಗೆ ಏನಾದರೂ.........

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಸೂದೆಯ ಮೇಲೆ ಮಾತನಾಡತಕ್ಕಂಥ ಶಬ್ದ ಒಂದೂ ಬರುತ್ತಿಲ್ಲ ಅವರಿಗೆ ಇದರ ಮೇಲೆ ಮಾತನಾಡುವುದಕ್ಕೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಒಳಗಡೆ ಇದೆ. ತಾವು ಸ್ವಲ್ಪ ನೋಡಬೇಕು. ಈ ಮಸೂದೆ ಒಳಗೆ ನೋಡಬೇಕು. ಹೊರಗೆ ನೋಡಿದರೆ ಇದರಲ್ಲಿ ಏನು ಗೊತ್ತಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ ಇವರ ಚೌಕಂಬ ಏನು ಇದೆ, ಅದು ಒಂದು ಕಾಲು ಬಾಟಲಿ.........

ಅಧ್ಯಕ್ಷರು.—ಸಾರಾಯಿ ವಿಷಯ ಬಿಟ್ಟು ಬಿಟ್ಟು ಮುಂದಿನ ವಿಷಯ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಪಕ್ಷಾಂತರ ನಿಷೇದ ಏನು ತಂದಿದ್ದಾರೆ, ನಮ್ಮ ಮೆಂಬರ್‌ಗಿರಿ ಹೋದರೂ ಕೂಡಾ ಓಟು ಕೊಡತಕ್ಕಂತದ್ದರ ಬಗ್ಗೆ ಈ ಮಸೂದೆ ಸಂಬಂಧಪಟ್ಟ ವಿಚಾರ. ಈ ಚೌಕಂಬ.........

ಅಧ್ಯಕ್ಷರು.—ನೀವು ರಿಪಿಟೆಷನ್ ಬಿಡುತ್ತೀರೋ ಇಲ್ಲವೋ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನೀವು ಈ ದೇಶದ ಮತದಾರರೆಲ್ಲ ಕುಡುಕರು ಎಂಬ ಅಭಿಪ್ರಾಯದಲ್ಲಿ ಹೇಳುತ್ತಿರುವುದು.........

(ಗೊಂದಲ)

ಈ ಜಿಲ್ಲಾ ಪರಿಷತ್ತಿನಲ್ಲೇ ಕುಡಿಯಲಿಲ್ಲ. ಪಾರ್ಲಿಮೆಂಟ್ ಚುನಾವಣೆಯಲ್ಲೂ ಕುಡಿದಿದ್ದಾರೆ. ಅಸೆಂಬ್ಲಿಯಲ್ಲೂ ಕುಡಿದಿದ್ದಾರೆ. ೪೦ ವರ್ಷಗಳಿಂದಲೂ ಕುಡಿಯುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಜೀರ್‌ಸಾಬ್‌ರವರೇ.........

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ.........

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ತಾವು ಗಮನ ಕೊಡಬೇಕು. ಹೆಮ್ಮಿಗೆಯವರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಪಕ್ಷಾಂತರ ನಿಷೇದದ ಪ್ರಶ್ನೆ ಇಲ್ಲಿರುವುದು.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುತ್ತಿರುವುದನ್ನು ಮಾನ್ಯ ಸಚಿವರು ಗಮನಿಸಬೇಕು, ಸ್ವಲ್ಪ ದಯವಿಟ್ಟು ತಾವು.........

(ಗೊಂದಲ)

ನನ್ನ ಮಾತು ಕೇಳಿ, ಅವರನ್ನು ಸುಮ್ಮನೆ ಕೂಡಿಸಿದರೆ ನಾನು ಮಾತನಾಡುವುದಕ್ಕೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ರೆಲೆವೆಂಟ್ ಆಗಿ ಮಾತನಾಡಿದರೆ ಅವರೂ ಸಹಾ ರೆಲೆವೆಂಟ್ ಆಗಿ ಮಾತನಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಒಬ್ಬರ ಸದಸ್ಯತ್ವ ಹೋದರೂ ಕೂಡಾ ಓಟು ಕೊಡತಕ್ಕಂಥ ಪರಿಸ್ಥಿತಿ ಇದೆ, ಬಡತನದಲ್ಲಿ ಹರಿಜನರು, ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು ಇರಬಹುದು. ಅದು ಸಹ ಈ ಬಿಲ್ಲಿಗೆ ಸಂಬಂಧಪಟ್ಟ ವಿಚಾರ.

(ಗೊಂದಲ)

ಅಧ್ಯಕ್ಷರು.—ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಇತರ ಸದಸ್ಯರ ವಾದಗಳನ್ನು ಬೇಸರ ಮಾಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದ ನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು.

"The speaker after having called the attention of the House to the conduct of a member who persists in irrelevance or in tedious reptition either of his own arguments or of the arguments used by other members in debate, may direct him to discontinue his speech.,,

ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಡಿಸ್‌ಕಂಟಿನ್ಯೂ ಮಾಡಬೇಕು ಎಂದು ಹೇಳುವುದಿಲ್ಲ..ಬಾಟಲಿ, ಸಾರಾಯಿ ಹೆಂಡ ಎಂದು ಅದನ್ನು ಹೇಳಿದರೆ ಅವರು ಸಹ ಅದನ್ನೇ ಶುರುಮಾಡುತ್ತಾರೆ, ಇದರಿಂದ ಕಾಂಗ್ರೆಸ್‌ನವರಿಗೂ ಹೆಂಡ ಕುಡಿಸಿದ್ದಾರೆ, ಜನತಾದವರಿಗೂ ಹೆಂಡ ಕುಡಿಸಿದ್ದಾರೆ ಎನ್ನುವಂಥ ಅಪವಾದ ಬರುತ್ತದೆ. ನೀವು ಒಳ್ಳೆಯವರು, ಅವರು ಒಳ್ಳೆಯವರು........

ಶ್ರೀ ಎಸ್. ಬಂಗಾರಪ್ಪ.— ಆದರೆ ನಮ್ಮ ದೃಷ್ಟಿಯಲ್ಲಿ ಅದು ಇಲ್ಲ ವಲ್ಲ.

ಅಧ್ಯಕ್ಷರು.—ತಾವು ೧೦ ನಿಮಿಷ ಮಾತನಾಡಿ ಮುಗಿಸಿಬಿಡ್ರಿ,

ಶ್ರೀ ಎಸ್. ಬಂಗಾರಪ್ಪ.— ನನ್ನ ಕಾಲವ್ಯಯ ಆಗುತ್ತಿರುವುದು ಮಧ್ಯೆ ಮಧ್ಯೆ ಅವರು ಬಾಯಿ ಹಾಕುತ್ತಿರುವುದರಿಂದಲೆ,

ಅಧ್ಯಕ್ಷರು.— ೪—೧೫ರವರೆಗೆ ಎಲ್ಲಾರೂ ಸುಮ್ಮನೆ ಇದ್ದುಬಿಡ್ರಿ.

ಶ್ರೀ ಎಸ್. ಬಂಗಾರಪ್ಪ.— ಈ ಬಿಲ್ಲಿನಲ್ಲಿ ಒಬ್ಬ ವ್ಯಕ್ತಿ ಆಯ್ಕೆಯಾಗಿದ್ದರೆ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯತ್ ಇರಬಹುದು. ಗ್ರಾಮೀಣ ಜೀವನದ ಬಡತನದ ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ.

ಈ ಮಾತನ್ನು ನಾನು ಎಚ್ಚರಿಕೆಯ ರೂಪದಲ್ಲಿ ಹೇಳುತ್ತೇನೆ. ಜನತಾ ಪಕ್ಷವೇ ಇರಬಹುದು, ಕಾಂಗ್ರೆಸ್ ಪಕ್ಷವೇ ಇರಬಹುದು. ಅದರಲ್ಲೂ ತಾವು ಜನತಾ ಪಕ್ಷದಿಂದ ಆಯ್ಕೆಯಾದವರು. ನಿಮ್ಮಲ್ಲಿ ಹಣ ಖರ್ಚು ಮಾಡುವ ಶಕ್ತಿ ಇದೆ. ಏತಕ್ಕೆಂದರೆ ಸರ್ಕಾರವೇ ನಿಮ್ಮದು ಇರುವಾಗ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ನಾಳೆ ದಿವಸ ನಿಮ್ಮ ಸದಸ್ಯತ್ವ ಹೋದರೂ ಚಿಂತೆ ಇಲ್ಲ. ಆ ಜನರು ಹಣವನ್ನು ತೆಗೆದುಕೊಂಡು ಓಟನ್ನು ಕೊಡತಕ್ಕಂಥ ಪರಿಸ್ಥಿತಿಗೆ ಹೋಗಬಾರದು, ಹಾಗೆ ಮಾಡಿದರೆ ಮುಂದೆ ಈ ಪರಿಸ್ಥಿತಿಗೆ ವಿರುದ್ಧವಾಗಿ ಮಾಡುವಂಥ ಕಾರ್ಯಕ್ರಮಗಳು ಬರುತ್ತವೆ. ಅದಕ್ಕೋಸ್ಕರವಾಗಿ ನಾನು ಪೂರ್ವಪೀಠಿಕೆಯಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಇನ್ನುಮುಂದೆ ರಾಜ್ಯಪಾಲರ ಭಾಷಣ ಮಾಡುವುದು ಬರುತ್ತದೆ. ನನಗೆ ಇದಕ್ಕೆ ಸಂಬಂಧಪಟ್ಟಂಥ ಎಲ್ಲ ದಾಖಲೆಗಳೂ ಇವೆ, ಆವಾಗ ಸಂಪೂರ್ಣವಾಗಿ ಹೇಳುತ್ತೇನೆ. ನೀವು ೪೦ ವರ್ಷ ಅಂತ ಹೇಳಿದ್ದೀರಿ. ನಾವು ೪೦ ವರ್ಷಗಳು ಏನು ಮಾಡಿದ್ದೇವೆ ಅದನ್ನೆಲ್ಲಾ ನೀವು ಒಂದೇ ದಿವಸದಲ್ಲಿ ಮುಗಿಸಿಬಿಟ್ಟಿದ್ದೀರಾ ?. ನೀವು ಆ ಜನಗಳ ಸಮಸ್ಯೆಗಳನ್ನು ಏನು ಬಗೆಹರಿಸಿದ್ದೀರಾ ಅನ್ನುವುದನ್ನು ಹೇಳುತ್ತೀರಾ ? ಮಾನ್ಯ ಸಭಾಧ್ಯಕ್ಷರೇ, ನಾನು ೨-೩ ಮುಖ್ಯವಾದ ವಿಚಾರಗಳನ್ನು ಮಾತ್ರ ಇಡುತ್ತೇನೆ. ಅದರಲ್ಲಿ ಮೊದಲನೇದು, ಯಾವ ವ್ಯಕ್ತಿ ಒಂದು ಪಕ್ಷದಿಂದ ಆಯ್ಕೆಯಾಗಿರುತ್ತಾನೋ ಅವನು ಆ ಪಕ್ಷಕ್ಕೆ ನಿಷ್ಠೆಯಾಗಿರಬೇಕು ಅನ್ನುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಸ್ವಾಗತ ಮಾಡತಕ್ಕಂಥ ವಿಚಾರ. ಅದಕ್ಕೋಸ್ಕರವಾಗಿ ನಾನು ಇದನ್ನು ಪೂರ್ವಪೀಠಿಕೆಯಾಗಿ ಹೇಳಿದ್ದೇನೆ. ಯಾವ ವ್ಯಕ್ತಿಯನ್ನು ನಾಮಕರಣ ಮಾಡಬೇಕು, ಆ ನಾಮಕರಣ ಮಾಡುವ ವಿಚಾರದಲ್ಲೇ ಎಲ್ಲರ ತಲೆಯೂ ಕೆಡುತ್ತಾ ಇದೆ. ಏತಕ್ಕೆಂದರೆ ನಾಮಕರಣ ಮಾಡತಕ್ಕಂಥ ಅಧಿಕಾರದಲ್ಲಿ ಓಟಿನ ಹಕ್ಕು ಇರಬೇಕೇ ಬೇಡವೆ ಅನ್ನುವುದು ಮುಖ್ಯವಾದುದ್ದು. ಅಧ್ಯಕ್ಷರೇ, ನಾಮಕರಣ ಮಾಡುವುದಕ್ಕೆ ಇದನ್ನು ಇಟ್ಟುಕೊಂಡಿದ್ದಾರೆಂದು ಹೇಳುತ್ತೇನೆ. ತಮ್ಮ ಗಮನಕ್ಕೆ ತರಬೇಕಾದರೆ If no person is elected from out of the backward class, then the Government will have the powers to nominate two persons. But according to the recent G.O. issued by your own Government everybody is now backward. 92% of the total population of Karnataka State are backward. ಈಗ ಲಿಂಗಾಯಿತರು ಮತ್ತು ಒಕ್ಕಲಿಗರು ಎಲ್ಲ ಬ್ಯಾಕ್‌ವರ್ಡ್ ಲಿಸ್ಟ್‌ನಲ್ಲಿ ಬರುತ್ತಾರೆ, ರಾಜ್ಯದಲ್ಲಿ ಒಟ್ಟಿನ ಪಾಪ್ಯುಲೇಷನ್‌ನಲ್ಲಿ ಮೈನಾರಿಟೀಸ್ ಬ್ಯಾಕ್‌ವರ್ಡ್ಸ್ ೯೨ ಪರ್ಸೆಂಟ್ ಇದೆ, ನನ್ನ ಪ್ರಕಾರ. ಈ ಮಾತನ್ನು ಮಾನ್ಯ ಕೆ. ರಾಮಯ್ಯನವರು ಒಪ್ಪಬಹುದು. ಇನ್ನು

ನಾಮಕರಣ ಮಾಡಿದರೆ ಇವರ ಪಕ್ಷದವರೇ ಅಧಿಕಾರಕ್ಕೆ ಬರಲು ಸಾಧ್ಯವಿದೆ. ಈ ರೀತಿ ನಾಮಕರಣ ಮಾಡುವುದರ ಮೂಲಕ ಅಧಿಕಾರಕ್ಕೆ ಬರಲು ಹೊರಟರೆ ಈ ಪ್ರಜಾಪ್ರಭುತ್ವ ಪದ್ಧತಿ ನಿಮ್ಮ ಈಗ ಎಲ್ಲಾ ಮಂಡಲಪಂಚಾಯತ್‌ಗಳಲ್ಲೂ ಬ್ಯಾಕ್‌ವರ್ಡ್ ಇದ್ದಾರೆ ಎಂದು ನನ್ನ ಭಾವನೆ. ಆದುದರಿಂದ ಅಲ್ಲಿಗೆಲ್ಲಾ ನಾಮಕರಣ ಮಾಡುವುದಕ್ಕೆ ಬರುವುದಿಲ್ಲ. ಸಮ ಸಮ ಇರತಕ್ಕಂಥ ಕಡೆಗಳಲ್ಲಿ ನಾಮಕರಣ ಮಾಡಿ ಅವರನ್ನು......

ಶ್ರೀ ಅಬ್ದುಲ್ ನಜೀರ್ ಸಾಬ್.—ಅದಕ್ಕೇನೇ ಬೇರೆ ಬಿಲ್ ಬರುತ್ತದೆ, ಆವಾಗ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಆ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವಾಗ ಆ ಪ್ರಶ್ನೆ ಇಲ್ಲಿ ಇರದಿದ್ದರೂ ಕೂಡ ಮುಂದೆ ಪಕ್ಷಾಂತರ ಬಿಲ್ ಬಂದಾಗ ಏನು ಮಾಡುತ್ತೀರಿ ಅನ್ನುವುದು ಗೊತ್ತಾಗುತ್ತದೆ. ಇದು ಯಾವಾಗ ಬರುತ್ತದೆ ಎಂದರೆ ಪ್ರಧಾನ, ಉಪಪ್ರಧಾನ ಮಾಡಬೇಕಾದ ಸಂದರ್ಭದಲ್ಲಿ ಇದು ಬರುತ್ತದೆ. ಹೇಗಾದರೂ ಈ ಚುನಾವಣೆ ನಡೆದ ಮೇಲೆ ವಿತ್ ಇನ್ ಥರ್ಟಿ ಡೇಸ್‌ನಲ್ಲಿ ಅದನ್ನು ಮಾಡಬೇಕಲ್ಲಾ ಆವಾಗ ಗೊತ್ತಾಗುತ್ತದೆ. ಇದಲ್ಲದೆ ಒಬ್ಬ ಸ್ವಂತಂತ್ರವಾದ ವ್ಯಕ್ತಿ ಗೆದ್ದುಬಂದರೆ ಅವನು ಕೊನೆಯವರೆಗೂ ಸ್ವತಂತ್ರವಾಗಿಯೇ ಉಳಿಯಬೇಕು. ನಮ್ಮ ಪಕ್ಷದ ಅಭಿಪ್ರಾಯವೂ ಕೂಡ ಅದೇ. ಒಂದು ವೇಳೆ ಅವನು ಯಾವ ಪಕ್ಷಕ್ಕಾದರೂ ಸೇರಬೇಕಾದರೆ 6 ತಿಂಗಳೊಳಗೆ ಸೇರಬೇಕು ಅನ್ನುವ ಕಾನೂನು ಇದೆ. ಆಮೇಲೇನಾದರೂ ಅವನನ್ನು ಒಂದು ಪಕ್ಷದ ಸದಸ್ಯನಾಗಿ ಮಾಡಬೇಕಾಗಿದ್ದರೆ, ಅವನನ್ನೇನಾದರೂ ನೀವು ನಾಮಕರಣ ಮಾಡಿದ್ದರೆ, ಕೊನೆಯವರೆಗೂ ಅವನು ಆ ಪಕ್ಷದ ಸದಸ್ಯನಾಗಿ ಉಳಿಯುತ್ತಾನೆ. ನೀವು ಅವನನ್ನು ನಾಮಕರಣ ಮಾಡುವ ಹಾಗೆ ಇದ್ದರೆ ಅವನಿಗೆ ನೀವೇ ಹಣ ಹಾಕಿ ಅವನ ಸದಸ್ಯತ್ವವನ್ನೂ ಸಹ ಭರಿಸಿ ಅವನನ್ನು ನಿಮ್ಮ ಪಕ್ಷದ ಸದಸ್ಯನಾಗಿ ಇಟ್ಟುಕೊಳ್ಳುತ್ತೀರಿ. ಅವನನ್ನು ನಾಮಕರಣ ಮಾಡುವ ಹಾಗೆ ಇದ್ದರೆ ನೀವು ಏನು ಬೇಕಾದರೂ ಮಾಡುತ್ತೀರಿ ? ಅದರ ಬಗ್ಗೆ ಬಿಲ್ ಬಂದಾಗ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ.—ಆ ಬಿಲ್ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಹೇಗಾದರೂ ಬಹುಮತ ಇದೆ. ನೀವು ಅದನ್ನು ತೆಗೆದುಕೊಂಡು ಬಂದಮೇಲೆ ಮಾತನಾಡುತ್ತೇನೆ. ನೀವು ತೆಗೆದುಕೊಂಡು ಬರುತ್ತೀರಿ ಅನ್ನುವುದು ಗೊತ್ತಿದೆ. ಅದರಲ್ಲಿ ಏನಾದರೂ ನಾಮಕರಣ ಮಾಡಿದ ವ್ಯಕ್ತಿಗೆ ಓಟಿನ ಹಕ್ಕು ಕೊಟ್ಟಿದ್ದರೆ ಆವಾಗ ನಾವು ನೋಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಅಂಥಾ ಬಿಲ್ಲನ್ನು ತಂದರೆ ಅದು ಜನತಾ ಪಕ್ಷದ ಕೊನೇ ದಿವಸವಾಗುತ್ತದೆ.

ಶ್ರೀ ಸಿದ್ದರಾಮಯ್ಯ.—ಬಿಲ್ ತಂದಾಗ ಇದರ ಬಗ್ಗೆ ಚರ್ಚೆ ಮಾಡೋಣ. ನಮಗೆ ಕೊನೇ ದಿವಸವೋ ನಿಮಗೆ ಕೊನೇ ದಿವಸವೋ ಅನ್ನುವುದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಯಡಿಯೂರಪ್ಪನವರು ಆ ದಿನ ಇವರಿಗೆ ಕೊನೆಯ ದಿವಸ ಎಂದು ಹೇಳಿದ್ದಾರೆ. ಆದರೆ ನಾನು ಆ ರೀತಿ ಹೇಳುವುದಿಲ್ಲ. ನಾನು ಹೇಳುವುದೇನೆಂದರೆ ಅದು ನಿಮ್ಮ ಕೊನೆಯ ದಿವಸ ಆರಂಭ ಎಂದು. ಅದು ನಿಮ್ಮ ಕೊನೆಯ ದಿವಸದ ಸಮೀಪ ಎಂದು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ನೀವು ಜೋತಿಷ್ಯ ಹೇಳುವುದನ್ನು ಯಾವಾಗ ಕಲಿತಿರಿ ?

ಶ್ರೀ ಆರ್. ಎನ್. ನಾಯಕ್.—ಅವರು ಯಾವಾಗ ಕಲಿತರು ?

ಶ್ರೀ ಎಸ್. ಬಂಗಾರಪ್ಪ.—ಸ್ವತಂತ್ರವಾಗಿ ಯಾರು ಯಾರು ಆಯ್ಕೆ ಆಗಿರುತ್ತಾರೆ, ಅವರು ಕೊನೆಯವರೆಗೂ ಸ್ವತಂತ್ರವಾಗಿಯೇ ಇರಬೇಕು, ಅವರು ಯಾವ ಪಕ್ಷಕ್ಕೂ ಹೋಗಬಾರದು ಎಂದು ಜನರು ಆಯ್ಕೆ ಮಾಡಿರುವುದರಿಂದ ಅವರು ಸ್ವತಂತ್ರವಾಗಿಯೇ ಉಳಿಯಬೇಕು. ಈ ಸಂಸ್ಥೆಗಳಿಗೆ ನೀವು ನಾಮಕರಣ ಮಾಡಲು ಹೊರಟರೆ, ಒಂದು, ಎರಡು, ಮೂರು ಹೀಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಈ ಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತದೆ. ಬೇರೆ ಪಕ್ಷದ ಸದಸ್ಯರುಗಳು ಸಹ ಕೆಲವು ಮಂಡಲಗಳಲ್ಲಿ ಬಹುಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ನನ್ನ ಕ್ಷೇತ್ರದಲ್ಲ 19 ಮಂಡಲಗಳು ಇವೆ. ಇವುಗಳ ಪೈಕಿ ಒಂದರಲ್ಲೂ ಇವರು ಗೆದ್ದಿಲ್ಲ. ಬೇರೆ ಕೆಲವು ಕಡೆಗಳಲ್ಲಿ ಇವರ ಪಕ್ಷದವರು ಅಧಿಕಾರಕ್ಕೆ ಬರಲು ಒಂದೆರಡು ಸೀಟುಗಳು ಕಡಿಮೆ ಇರಬಹುದು. ಅಂತಹ ಕಡೆಗಳಲ್ಲಿ ಇವರೇನಾದರೂ ಕೆಲವರನ್ನು

ಕೈಯಿಂದಲೇ ಭಸ್ಮವಾಗುತ್ತದೆ. ನಂತರ ಇದು ಭಸ್ಮಾಸುರನ ಕಥೆಯಂತೆ ಆಗುತ್ತದೆ. ಆದ್ದರಿಂದ ನೀವು ಈ ಕೆಲಸಕ್ಕೆ......

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ತಿದ್ದುಪಡಿ ಶಾಸನಕ್ಕೆ ಸಂಬಂಧಪಡದ ವಿಚಾರಗಳನ್ನು ಹೇಳುತ್ತಿದ್ದಾರೆ. ಈ ತಿದ್ದುಪಡಿ ಮಸೂದೆ ಪಾಸಾದ ನಂತರ ಬೇರೊಂದು ತಿದ್ದುಪಡಿ ಮಸೂದೆ ಬರುತ್ತದೆ. ಆಗ ಇವರು ಇದೆಲ್ಲವನ್ನೂ ಮಾತನಾಡುವುದಕ್ಕೆ ಅವಕಾಶವಿದೆ. ಅದನ್ನು ಬಿಟ್ಟು ಈಗಲೇ ಮಾತನಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನಾನು ಇದನ್ನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದಾದ ನಂತರ ಬರುವ ಬಿಲ್ಲನ್ನು ನಾನು ಓದಿದ್ದೇನೆ. ನಾನು ಇಲ್ಲಿಗೆ ಬರುವುದಕ್ಕೆ ಮೊದಲು ಎಲ್ಲವನ್ನೂ ಓದಿಕೊಂಡು ಬಂದಿರುತ್ತೇನೆ. ನಾನು ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಪಕ್ಷಾಂತರ ನಿಷೇಧ ಮಸೂದೆ ಏನಿದೆ, ಇದರ ಬಗ್ಗೆ ಇವರ ನೀತಿ ಏನಿದೆ ಎಂಬುದನ್ನು ಇಲ್ಲಿ ಪ್ರತಿಪಾದನೆ ಮಾಡಬೇಕು. ಬಹುಮತ ಇದ್ದರೆ ಏನು ಮಾಡಬೇಕು, ಸಮಾನ ಮತಗಳು ಬಂದಿದ್ದರೆ ಏನು ಮಾಡಬೇಕು ಎಂಬುದರ ಬಗ್ಗೆ ಒಂದು ಕಾನೂನನ್ನೇ ಜಾರಿಗೆ ತರುವುದು ಒಳ್ಳೆಯದು. ಇಲ್ಲದಿದ್ದರೆ ಏನಾಗುತ್ತದೆಂದರೆ, ಇವರು ಒಂದು ಕಡೆ ಪ್ರಜಾಪ್ರಭುತ್ವದ ತತ್ವದ ಬಗ್ಗೆ ಮಾತನಾಡಿ ಇನ್ನೊಂದು ಕಡೆ ಆ ಒಂದು ತತ್ವವನ್ನೇ ಕೊಲ್ಲುವುದಕ್ಕೆ ಹೊರಟಂತೆ ಆಗುತ್ತದೆ. ಆ ಕೆಲಸ ಮಾಡಲು ನೀವು ಹೋಗಬೇಡಿ. ಇಲ್ಲಿನ ಸದಸ್ಯರು ತಮ್ಮ ಪಕ್ಷವನ್ನು ಏನಾದರು ಬಿಟ್ಟರೆ ಅವರ ಸದಸ್ಯತ್ವ ಹೋಗುತ್ತದೆ. ಇದರ ಜೊತೆಗೆ ಅವರ ಪಕ್ಷದ ವಿಪ್ ಕೊಟ್ಟ ಮಾರ್ಗದರ್ಶನದಂತೆ ನಡೆದುಕೊಳ್ಳದಿದ್ದಾಗ ಸಹ ಅವರ ಸದಸ್ಯತ್ವ ಹೋಗುತ್ತದೆ. ಇಲ್ಲಿ ೬ ತಿಂಗಳು ಎನ್ನತಕ್ಕಂಥ ಒಂದು ಕಲಂ ಇಟ್ಟಿದ್ದಾರೆ. ಇವರಿಗೆ ಬೇಕಾದವರನ್ನು ನಾಮಕರಣ ಮಾಡಲು ಅನುಕೂಲವಾಗುವ ರೀತಿಯಲ್ಲಿ ಈ ಕಲಂ ಇಟ್ಟಿದ್ದಾರೆ. ಇದರ ಜೊತೆಗೆ ಇಲ್ಲಿನ ಮಂಡಲ ಪಂಚಾಯಿತಿ ಸದಸ್ಯರು ಪಕ್ಷಾಂತರ ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನ ಮಾಡುವ ಅಧಿಕಾರವನ್ನು ಜಿಲ್ಲಾಪರಿಷತ್ತಿನಲ್ಲಿ ಕೆಲಸ ಮಾಡುವ ಚೀಫ್-ಸೆಕ್ರೆಟರಿ ಅವರಿಗೆ ಕೊಟ್ಟಿದ್ದಾರೆ. ಅದೇ ಮುನಿಸಿಪಲ್ ಕಾರ್ಪೊರೇಷನ್ ಸದಸ್ಯರಿಗೆ ಸಂಬಂಧಪಟ್ಟಂತೆ ಬರುವ ಕೇಸ್‌ಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನು ವಿಭಾಗಾಧಿಕಾರಿಯವರಿಗೆ ಕೊಟ್ಟಿದ್ದಾರೆ. ಈ ಅಧಿಕಾರಿಗಳಿಗೆಲ್ಲಾ ಇವರ ಅಧೀನದಲ್ಲಿಯೇ ಕೆಲಸ ಮಾಡುವವರಾಗಿದ್ದಾರೆ. ಜಿಲ್ಲಾ ಪರಿಷತ್ತಿನ ಚೀಫ್-ಸೆಕ್ರೆಟರಿ ಅಂದರೆ ಯಾರು ? ಮಾನ್ಯ ನಜೀರ್‌ಸಾಬ್ ಅವರು ಹೇಳಿದಂತೆ ಕೇಳುವುದನ್ನು ಬಿಟ್ಟು ಮತ್ತೆ ಅವರು ಬೇರೆ ಏನನ್ನೂ ಮಾಡುವುದಿಲ್ಲ. ಆದ್ದರಿಂದ ಈ ಕ್ರಮ ಸರಿಯಲ್ಲ. ಈ ಒಂದು ಅಧಿಕಾರವನ್ನು ನ್ಯಾಯಾಂಗಕ್ಕೆ ಒಪ್ಪಿಸುವುದು ಒಳ್ಳೆಯದು. ಜ್ಯುಡಿಷಿಯಲ್‌ಗೆ ಈ ಅಧಿಕಾರ ಕೊಡದಿದ್ದರೆ ನಿಮ್ಮ ಒಂದು ಸ್ವಾರ್ಥ ರಾಜಕಾರಣಕ್ಕಾಗಿ, ಪಕ್ಷ ರಾಜಕೀಯಕ್ಕಾಗಿ ಹಾಗೂ ನೀವೇ ಅಧಿಕಾರದಲ್ಲಿ ಶಾಶ್ವತವಾಗಿ ಉಳಿಯುವುದಕ್ಕಾಗಿ ಈ ರೀತಿಯ ಕಾನೂನು ತಂದಿದ್ದೀರಿ ಎಂದು ಹೇಳಬೇಕಾಗುತ್ತದೆ. ಇದರಲ್ಲಿ ಕ್ಲಾಸ್-೪ನಲ್ಲಿ ೨೪ ಅವರ್ಸ್‌ನಲ್ಲಿ ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಬೇಕು ಎಂದು ಇದೆ. ಮತ್ತೆ ಜಿಲ್ಲಾ ಪರಿಷತ್‌ಗೆ ಮುಖ್ಯ ಕಾರ್ಯದರ್ಶಿ, ಮುನಿಸಿಪಲ್ ಕಾರ್ಪೊರೇಷನ್‌ಗೆ ವಿಭಾಗೀಯ ಕಮೀಷನರು, ನಗರ ಅಥವಾ ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಗೆ ಡೆಪ್ಯುಟಿ ಕಮಿಷನರ್ ಮಂಡಲ ಪಂಚಾಯಿತಿಗೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಕಳಿಸತಕ್ಕದ್ದು ಮತ್ತು ಅವರು ೭ ದಿವಸಗಳಲ್ಲಿ ಅದನ್ನು ತೀರ್ಮಾನ ಮಾಡಬೇಕು ಎಂದು ಇದೆ. ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳತಕ್ಕಂಥಾದ್ದು ಏನೆಂದರೆ, ಕೋರ್ಟ್‌ಗಳು ಯಾವುದು ಇದೆ, ಅಲ್ಲಿಗೆ ಇವನ್ನೆಲ್ಲಾ ಜುಡಿಶಿಯಲ್ ಜೂರಿಸ್‌ಡಿಕ್ಷನ್‌ಗೆ ಏನಾದರೂ ಕಳಿಸಿದರೆ ಇವರ ಚಿಂತನೆ ಪುಡಿ ಪುಡಿಯಾಗಿ ನುಚ್ಚು ನೂರಾಗುತ್ತದೆ. ಆದ್ದರಿಂದ ಕೋರ್ಟಿನ ಜೂರಿಸ್‌ಡಿಕ್ಷನ್‌ಗೆ ಕೊಡದೆ ಪ್ರತಿಯೊಂದೂ ಜನತಾಪಾರ್ಟಿಯ ತೀರ್ಮಾನಕ್ಕೆ ಬರಬೇಕು, ಜನತಾ ಪಕ್ಷದ ಸರ್ಕಾರದ ತೀರ್ಮಾನಕ್ಕೆ ಬರಬೇಕು ಅಂದರೆ ಇದರಲ್ಲಿ ಯಾವ ನೀತಿ, ಮತ್ತು ನ್ಯಾಯ ಇದೆ. ಏಕೆಂದರೆ ಅವರ ಪಾರ್ಟಿಗೆ ಬೆಂಬಲ ಕೊಟ್ಟಿರುತ್ತಾರೆ, ಓಟ್ ಕೊಟ್ಟಿರುತ್ತಾರೆ. ಇವರ ಪಾರ್ಟಿಯಿಂದ ಜಿಲ್ಲಾ ಪರಿಷತ್‌ಗೆ, ಮಂಡಲ್ ಪಂಚಾಯತ್‌ಗೆ ಅಧ್ಯಕ್ಷರಾಗಿರುತ್ತಾರೆ. ಪ್ರಧಾನ್, ಉಪಪ್ರಧಾನ್ ಆಗಿಬಿಟ್ಟಿರುತ್ತಾರೆ. ನಾಳೆ ನೀವು ತಲೆ ಮೇಲೆ ಕಿರೀಟ ಇಟ್ಟುಕೊಂಡು ಬಹುಪರಾಕ್ ಹಾಕಿಕೊಳ್ಳುವುದಕ್ಕೆ ಬರುವುದಿಲ್ಲ, ಜನರು ಬಹುಪರಾಕ್ ಹಾಕಬೇಕು. ಜನತೆಯ ಕೈಗೆ ಅಧಿಕಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ ಚೀಫ್ ಸೆಕ್ರೆಟರಿ, ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್ ಇದ್ದಾರೆ ಎನ್ನುವ ಮಾತನ್ನು ಹೇಳಿ ಅಧಿಕಾರವನ್ನು ನಿಮ್ಮ ಕೈಯಲ್ಲೇ ಇಟ್ಟುಕೊಳ್ಳುವ ತಂತ್ರ ಈ ಪಕ್ಷಾಂತರ ನಿಷೇಧ ಮಸೂದೆಯಲ್ಲಿ ಅಡಗಿದೆ. ಒಂದು ನೀತಿಯ ದೃಷ್ಟಿಯಿಂದ ಈ ಬಿಲ್ಲನ್ನು

ಸ್ವಾಗತ ಮಾಡಿದರೂ ಕೆಲವು ಕಾರಣಗಳಿಂದ ವಿರೋಧಿಸುತ್ತೇನೆ, ಅಂಥರೆ ಮೊನ್ನೆ ನಡೆದ ಕಾರ್ಯ ಕ್ರಮಗಳೇ ಅದಕ್ಕೆ ಸಾಕ್ಷಿಯಾಗಿದೆ. ಮುಂದೆ ಹೇಗೆ ಮಾಡುತ್ತೀರೋ ಅದು ಬೇರೆ ವಿಚಾರ. ಇಷ್ಟನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೆ, ಈ ಪಕ್ಷಾಂತರ ನಿಷೇಧ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಗ್ರಾಮೀಣ ಜನರ ಜೀವನವನ್ನು ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಯತ್ತ ಒಯ್ಯಬಲ್ಲುದು ಎನ್ನುವುದು ಇದರಲ್ಲಿ ಅಡಗಿದೆ. ಆದರೆ ಒಂದು ಚಿಂತನೆಯನ್ನು ಕೂಡ ಮಾಡಬೇಕಾಗಿದೆ. ಮೊದಲೇ ರಾಜಕೀಯ ಹುತ್ತಗಳಾಗಿರುವ ಹಳ್ಳಿಗಳಲ್ಲಿ ಮತ್ತೆ ರಾಜಕೀಯ ಹೆಚ್ಚಾಗಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳು ತ್ತವೆಯೋ ಹೇಗೆ ಎನ್ನುವುದನ್ನೂ ಕೂಡ ನಾವು ಚಿಂತನೆ ಮಾಡಬೇಕಾಗಿದೆ. ಆದರೆ ಒಳ್ಳೆಯ ಕೆಲಸ ಗಳನ್ನು ಮಾಡುವಾಗ ಪ್ರಾರಂಭಿಕವಾಗಿ ಕೆಲವು ತೊಂದರೆಗಳು ಬರುವುದು ಸ್ವಾಭಾವಿಕ. ಇದರಿಂದ ಸಾಂಸಾರಿಕ ಕೊಲೆಗಳು, ಮನೆಮನೆಯಲ್ಲಿ ರಾಜಕೀಯ ಕೊಲೆಗಳು ಆಗಬಹುದು ಎನ್ನುವ ಮಾತೂ ಕೂಡ ಅಲ್ಲಲ್ಲಿ ಕೇಳಿಬರುತ್ತಿದೆ. ಆದರೆ ಇದನ್ನೆಲ್ಲಾ ಸರಿಪಡಿಸುವ ಒಂದು ಮನಸ್ಸಿನ ಮಾತು ಕೂಡ ಇಲ್ಲಿದೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಒಂದು ಗ್ರಾಮಸಭೆ ಎಂದು ಮಾಡಿದ್ದಾರೆ. ಆದರೆ ಈ ಗ್ರಾಮಸಭೆ ಬಲಗೊಳ್ಳುತ್ತಿದೆ ಬಹುಶಃ ಮತದಾರರೆಲ್ಲರನ್ನೂ, ಏಕೆಂದರೆ ಮತದಾರರು ಯಾವುದೇ ರಾಜಕೀಯ ಪಕ್ಷಕ್ಕೆ ಅಂಟಿಕೊಂಡಿರುವುದಿಲ್ಲ. ಮತದಾರರ ಹಿಡಿತದೊಳಗೆ ಪ್ರತಿಯೊಂದು ಮಂಡಲಗಳು ಉಳಿಯುವುದರಿಂದ ಅಲ್ಲಿ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ನಿಮಗೆ ಡಿಫೆಂಡ್ ಮಾಡುವುದಕ್ಕೆ ಬರುವುದಿಲ್ಲವೇ?

ಶ್ರೀ ಜಿ. ಎಸ್. ದೊಡ್ಡಮೇಟಿ.—ರಾಜಕೀಯ ಹಿಡಿತದಲ್ಲಿದೆ ಎಂದು ಹೇಳಿದನು. ಅದಕ್ಕೋಸ್ಕರ ಜನಶಕ್ತಿಯ ಹಿಡಿತಕ್ಕೆ ಮಂಡಲಗಳು ಬರುತ್ತವೆ ಎಂದು ಹೇಳುತ್ತಿದ್ದೆ.

ಅಧ್ಯಕ್ಷರು.—ದೊಡ್ಡ ಮೇಟಿಯವರೇ. ನಿಮಗೆ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಡಿಫೆಂಡ್ ಮಾಡುವುದಕ್ಕೆ ಬರಲ್ಲವೆ ಎಂದು ನೀವೇ ಹೇಳಿದರೆ ಹೇಗೆ?

ಅಧ್ಯಕ್ಷರು.—ಡಿಫೆಂಡ್ ಮಾಡುವುದು, ಮತ್ತು ಅಪೋಸ್ ಮಾಡುವುದು ಎಲ್ಲವನ್ನು ಹೇಳಿ ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಸ್ಥಾನದಲ್ಲಿ ಕೂತು ತಾವೇ ಸಪೋರ್ಟ್ ಮಾಡಿ. ಡಿಫೇಂಡ್ ಮಾಡಿ, ಅಪೋಸ್ ಮಾಡಿ ಎಂದು ಹೇಳಿದರೆ ಅದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇತ್ತೀಚೆಗಿನ ರಾಜಕೀಯ ಹುತ್ತಗಳಿಂದ ಗ್ರಾಮೀಣ ಜನಜೀವನ ಹಾಳಾಗಿ ಹೋಗಿದೆ ಎಂದು ಒಳ್ಳೆಯ ಪೀಠಿಕೆ ಹಾಕಿದ್ದರು.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಈ ರೀತಿ ಒಂದು ಚಿಂತನೆ ಇದೆ. ಹಳ್ಳಿಗಳು ಹಾಳಾಗುತ್ತೆ. ರಾಜಕೀಯಕ್ಕೆ ಬೆಂಕಿ ಬೀಳುತ್ತೆ. ಆದರೂ ರಾಜಕೀಯ ಹಿಡಿತದೊಳಗೆ ಪ್ರತಿಯೊಂದು ಮಂಡಲಗಳು ಉಳಿಯುತ್ತವೆಂದು ಹೇಳುವುದಕ್ಕೆ ಬರುವುದಿಲ್ಲ. ಈ ಒಂದು ವಿಧೇಯಕದೊಳಗೆ ಗ್ರಾಮಸಭೆಗಳು ರಾಜಕೀಯ ರಹಿತವಾಗಿರುತ್ತವೆ. ರಾಜಕೀಯ ಶಕ್ತಿಯ ಕೈವಾಡ ನಡೆಯುವುದಿಲ್ಲ ವೆಂದು ಈ ಮೂಲಕ ಹೇಳಿದ್ದಾರೆ. ಇಲ್ಲಿ ಮಾನ್ಯ ಸದಸ್ಯರು ಹೆಂಡದ ವಿಷಯ ಹೇಳಿದ್ದಾರೆ. ಯಾವುದೇ ಪಕ್ಷ ಚುನಾವಣೆಗೆ ಇಳಿಯಲಿ ಬಹುತೇಕವಾಗಿ ಅದರ ಮೂಲವನ್ನು ಹುಡುಕುತ್ತಾ ಹೋದರೆ, ಮಣ್ಣಿನ ಗೋಡೆಗೆ ನೀರೆರಚಿ ತೊಡೆದಹಾಗೆ ಆಗುತ್ತದೆ. ಪಕ್ಷಾಂತರ ರಾಜಕೀಯ ಶೀಲವನ್ನು ಉಳಿಸಿಕೊಂಡು ಬರುತ್ತದೆಯೋ ಹೇಗೆ ಅದನ್ನು ನೋಡಬೇಕು. ಒಬ್ಬೊಬ್ಬರು ಪಕ್ಷಾಂತರ ಆಗುವಂತಿಲ್ಲ. ಅರ್ಧದಷ್ಟು ಪಕ್ಷಾಂತರ ಮಾಡಿದರೆ ಬದಲಾವಣೆ ಅಂಥ ಪರಿಗಣಿಸಿದ್ದೇವೆಂದು ಹೇಳಿರುವುದನ್ನು ಕೂಡ ದಯವಿಟ್ಟು ಕೈಬಿಡಬೇಕು. ಒಬ್ಬರು ಮಾಡಲಿ. ಅರ್ಧದಷ್ಟು ಮಾಡಲಿ ಅದನ್ನು ಕೂಡ ಪಕ್ಷಾಂತರ ನಿಷೇಧಕ್ಕೆ ಒಳಪಡಿಸಬೇಕು. ಇದರಿಂದ ಕೊಂಡುಕೊಳ್ಳತಕ್ಕಂಥಾದ್ದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಂದ್ ಆಗುತ್ತದೆ. ಪಕ್ಷಾಂತರ ನಿಷೇದದಿಂದ ರಾಜಕೀಯ ಶೀಲ, ಸಾಮಾಜಿಕ ಶೀಲ ಬೆಳೆಯುತ್ತದೆನ್ನುವ ಭಾವನೆಯಿಂದ, ಈ ಮಸೂದೆಗೆ ಸ್ವಾಗತಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕ, ೧೯೮೭ ಸ್ವಾಗತಾರ್ಹವಾದುದು ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ, ಪಕ್ಷಾಂತರ ಮಾಡಕೂಡದು ಎನ್ನುವುದು ಒಂದು ತತ್ವದ ಆಧಾರದ ಮೇಲೆ ತರಲಾಗಿದೆ. ಈ ಮಸೂದೆಯ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಒಂದು ಸಣ್ಣ ಕ್ಲಾರಿಫಿಕೇಷನ್‌ನ್ನು ಮಾನ್ಯ ಮಂತ್ರಿಯವರು ಕೊಡಬೇಕಾಗುತ್ತದೆ. ಇದು ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ಸರಿಯೇ ಎನ್ನುವುದು ಬೇಕಾಗಿದೆ. ಈ ವಿಧೇಯಕವನ್ನು ಕನ್ನಡವಲ್ಲಿಯೂ ತಂದಿದ್ದೀರಿ. ಮತ್ತೆ ಇಂಗ್ಲೀಷನ್ನು ಕೂಡ ಸೇರಿಸಿದ್ದೀರಿ. ಪುಟ ೩-೬ರಲ್ಲಿ ಕೆಲವು ಇಂಗ್ಲೀಷಿನಲ್ಲಿವೆ.

> "೧೯೬೪ರ ಕರ್ನಾಟಕ ಅಧಿನಿಯಮ ೨೨ರಲ್ಲಿ, ೧೬ನೇ ಪ್ರಕರಣದ (೧)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ—

A person shall be disqualified for being considered if he is so disqualified ಎಂದು ಹಾಕಿದ್ದೀರಿ. ಮುಂದೆ ಇಂಗ್ಲೀಷ್ ಬರುತ್ತದೆ. ಹಾಗೆಯೇ ಮತ್ತೆ ಮುಂದೆ ಇಂಗ್ಲೀಷ್ ಬರುತ್ತದೆ. ನಾನು ನೋಡುತ್ತಾ ಇದ್ದೆ, ಕನ್ನಡದಲ್ಲಿ ತರತಕ್ಕ ಮಸೂದೆಯಲ್ಲಿ ಇಂಗ್ಲೀಷನ್ನು ಮಧ್ಯೆ ಏತಕ್ಕೆ ಸೇರಿಸಿದರು ಎಂದು ಅರ್ಥ ಆಗಲಿಲ್ಲ. ಒರಿಜಿನಲ್ ಆ್ಯಕ್ಟ್‌ನಲ್ಲಿ ಇಂಗ್ಲೀಷ್‌ನಲ್ಲಿ ಇರುವುದರಿಂದ ಈ ಒಂದು ವಿಧೇಯಕವನ್ನು ತಿದ್ದುಪಡಿ ಮಾಡಿದರೆ ಇಂಗ್ಲೀಷ್‌ನಲ್ಲಿಯೇ ಅಚ್ಚು ಹಾಕಬೇಕೆಂದು ತೀರ್ಮಾನ ಮಾಡಿದ್ದೀರಿ ಎಂದು ಕಾಣುತ್ತದೆ. ಒಂದು ಭಾಷೆಯಲ್ಲಿ ಮಾಡಿದರೆ ಅದು ಸರಿ. ಇಂಗ್ಲೀಷ್‌ನಲ್ಲಿ ಮಾಡಿ ಅಥವಾ ಕನ್ನಡದಲ್ಲಿ ಮಾಡಿ, ಕನ್ನಡದ ಬಿಲ್ಲಿನಲ್ಲಿ ಇಂಗ್ಲೀಷ್ ಏತಕ್ಕೆ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಆ್ಯಕ್ಟ್ ಇಂಗ್ಲೀಷ್‌ನಲ್ಲಿಯೇ ಇದ್ದುದರಿಂದ ಹಾಕಿದೆ. ರಾಜ್ಯಾಂಗದಲ್ಲಿಯೂ ಅದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾನ್‌ಸ್ಟಿಟ್ಯೂಷನ್ ರೈಟ್ಸ್ ಬಗ್ಗೆ ನಾನು ಹೇಳುತ್ತಿಲ್ಲ. ಒಂದು ಒಳ್ಳೆಯ ಉದ್ದೇಶದಿಂದ ಕೂಡಿದೆ ಎಂದು ಆಗಲೇ ಹೇಳಿದೆ. ಪಕ್ಷಾಂತರ ಪಿಡುಗು ನಮ್ಮ ದೇಶದಲ್ಲಿ ಇತ್ತು, ಇನ್ನೂ ಕೂಡ ಇದೆ. ನಮ್ಮ ಚರಿತ್ರೆಯಲ್ಲಿ ಅನೇಕ ವಿಚಾರಗಳು ಇವೆ. ನಮ್ಮ ಕಣ್ಣ ಮುಂದೆ ಬರತಕ್ಕ ಒಂದು ನಿದರ್ಶನ ಅಂದರೆ ಹರಿಯಾಣದ ನಿದರ್ಶನ. ಒಬ್ಬ ಮಂತ್ರಿಯಾಗಿದ್ದವರು ಹನ್ನೊಂದು ಸಾರಿ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಹೋಗಿ ಕಡೆಗೆ ಆ ಗವರ್ನ್‌ಮೆಂಟ್ ಹೋಯಿತು. ಆಯಾರಾಂ ಗಯಾರಾಂ ವಿಷಯ ತಮಗೆ ತಿಳಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವರು ಡಿಫೆಕ್ಟ್ ಮಾಡಿಕೊಂಡೇ ಉಳಿದರು ಅವನ್ನು ತಾವು ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ನಾಟಕದಲ್ಲಿ ದೇವರಾಜ್ ಅರಸ್‌ರು ಇದ್ದಾಗ ಕಾಂಗ್ರೆಸ್ (ಡಿ) ಬೇರೆ ಮಾಡಿದರು. ಅನೇಕ ಸಂದರ್ಭಗಳಲ್ಲಿ ಅತಿರಥಮಹಾರಥರು ರಾತ್ರೋರಾತ್ರಿ ಕೈಬಿಟ್ಟು ಬೇರೆ ಪಕ್ಷಕ್ಕೆ ಹಾರಿದರು. ಇದೂ ಕೂಡ ಚರಿತ್ರೆ. ಇದಕ್ಕಿಂತಲೂ ಅನೈತಿಕವಾದ ವರ್ತನೆ ಯಾವುದೂ ಇಲ್ಲ. ಎಂದು ನಮ್ಮ ಅಭಿಪ್ರಾಯ, ಮತ್ತು ನಮ್ಮ ಪಕ್ಷದ ಅಭಿಪ್ರಾಯ ಸಹ. ನಮ್ಮ ಪಕ್ಷದಲ್ಲಿ ಆ ರೀತಿಯ ಪರಿಸ್ಥಿತಿ ಬಂದಿಲ್ಲ, ಬರುವುದೂ ಇಲ್ಲ. ಆದ್ದರಿಂದ, ಈ ಪಕ್ಷಾಂತರ ಪಿಡುಗು ಹೋಗಬೇಕು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರಿದರೂ ಸಹ ಅವನಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳುವುದು ಸರಿಯಲ್ಲ ಎಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಇನ್ನೊಂದು ವಿಷಯ ಅಂದರೆ ಈ ಪಕ್ಷಾಂತರ ಆಗುತ್ತಿರುವುದು ಏತಕ್ಕೆ ಎನ್ನುವುದೇ ಪ್ರಶ್ನೆ. ಅದರ ಬಗ್ಗೆ ಕೂಡ ಅವಲೋಕನೆ ಮಾಡಿದರೆ ಒಳ್ಳೆಯದು ಎಂದು ನನ್ನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಭಿಪ್ರಾಯ. ಎಲ್ಲರಿಗೂ ಗೊತ್ತಿರುವ ಹಾಗೆ ಯಾರೇ ಪಕ್ಷದಲ್ಲಿ ಇರಲಿ ಒಂದು ಅಧಿಕಾರ ದಾಹ, ಕಿಸ್ಸಾಕುರ್ಸೀಕಾ ಕೇಳಿದ್ದೀರಿ, ಹೇಗಾದರೂ ಮಾಡಿ ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕು. ಹೇಗಾದರೂ ಮಾಡಿ ಎಂ.ಎಲ್.ಎ. ಆಗಬೇಕು, ಇಲ್ಲ ಯಾವುದಾದರೂ ಒಂದಕ್ಕೆ ಅಧ್ಯಕ್ಷ ಆಗಬೇಕು, ಇಲ್ಲ ಇನ್ನೊಂದು ಆಗಬೇಕು. ಎಂದು ಯಾವ ಪಕ್ಷದಲ್ಲಿ ಹೋದರೆ ಅನುಕೂಲ ಆಗುತ್ತದೆ ನೋಡಿ ಕೊಂಡು ಹೋಗಿ ಅನುಕೂಲ ಸಿಂಧು ನೀತಿಯನ್ನು ಅನುಸರಿಸಿ ನಡೆಯುತ್ತಾರೆ. ಇದು ಅನೇಕ ರಾಜಕಾರಣಿಗಳಲ್ಲಿದೆ, ಅಂದರೆ ಎಷ್ಟು ಅಧೋಪತನಕ್ಕೆ ಹೋಗುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಮೌಲ್ಯಾಧಾರಿತ ರಾಜಕಾರಣವನ್ನು ಮಾತನಾಡಿದ ಅನೇಕ ಜನ ಇವತ್ತು ಆಕಡೆ ಕೂತಿದ್ದಾರೆ ಮೊದಲು ಈಕಡೆ ಇದ್ದಾಗ ಹಾರಾಡುತ್ತಿದ್ದರು. ಅಂಥವರನ್ನು ಈ ಸಭೆಯಲ್ಲಿ ನಾನು ನೋಡುತ್ತಿದ್ದೇನೆ.......

೪-೩೦ ಪಿ. ಎಂ.

ಒಬ್ಬ ಮಾನ್ಯ ಸದಸ್ಯರು.—ಈಗ ನೀವು ಎಲ್ಲಿದ್ದೀರಿ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇಲ್ಲೇ ಇದ್ದೇನೆ. ಕಿಸ್ಸಾ ಕುರ್ಸೀಕಾ ನಮ್ಮದಲ್ಲ ನಿಮ್ಮದು. ಸ್ವಾಮಿ, ಇನ್ನೊಂದು ವಿಚಾರ ಎಂದರೆ, ಸೈದ್ಧಾಂತಿಕ ತಿಳುವಳಿಕೆಯ ಅಭಾವ ಇರುವುದು ಇದನ್ನು ಮಾನ್ಯ ಸಚಿವರಾದ ನಜೀರ್‌ಸಾಬ್‌ರವರೂ ಒಪ್ಪಿಕೊಳ್ಳುತ್ತಾರೆಂದು ಅಂದುಕೊಂಡಿದ್ದೇನೆ. ಅವರು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಬಹಳಷ್ಟು ಮಾತನಾಡುತ್ತಾರೆ. ಸೈದ್ಧಾಂತಿಕ ನಡುವಳಿಕೆ ಎಂದರೆ ನಮ್ಮ ಮಾರ್ಕ್ಸ್‌ವಾದಿ ವಾದದಲ್ಲಿ ಏನೇನಿದೆ ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ; ಇನ್ನೂ ಮುಂತಾದ ಎಲ್ಲಾ ಪಕ್ಷಗಳೂ ಇವೆ. ಸೈದ್ಧಾಂತಿಕದ ಬಗ್ಗೆ ತಿಳುವಳಿಕೆ ಇರುವವರು, ಅಥವಾ ಆ ತಿಳುವಳಿಕೆಯನ್ನು ಎಲ್ಲಾ ಸದಸ್ಯರು ಪಡೆದುಕೊಂಡಿದ್ದರೆ, ಅಥವಾ ಆ ನಾಯಕರು ಪಡೆದುಕೊಂಡಿದ್ದರೆ ಅವರು ಆದಿವಸ ಆ ಪಕ್ಷವನ್ನು ಬಿಡುತ್ತಿರಲಿಲ್ಲ. ಆದರೂ ನಾನು ಒಂದ ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ ಎಲ್ಲಕ್ಕಿಂತ ಮುಖ್ಯವಾಗಿ ಮಾನ್ಯ ಬಂಗಾರಪ್ಪನವರು ಹೇಳಿದಂತೆ ಸಮಯಸಾಧಕತನ, ಹಣ, ಆಮಿಷ ಇವೂ ಕೂಡ ಒಂದು ಕಾರಣವಾಗಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಮೊನ್ನೆ ನಾವು ರಾಜ್ಯಸಭೆಗೆ ಒಬ್ಬ ವ್ಯಕ್ತಿಯನ್ನು ಆರಿಸ ಬೇಕಾಗಿತ್ತು. ನಾನು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಯಾವ ವ್ಯಕ್ತಿಯನ್ನು ಆರಿಸಬೇಕಾಗಿತ್ತು ಆ ವ್ಯಕ್ತಿ ಅನೇಕ ಜನರ ಹತ್ತಿರ ಬಂದರು. ಆಗ ನಾವು ಲಾಂಜ್‌ನಲ್ಲಿ ಕೂಳಿತಿದ್ದೆವು. ಆ ವ್ಯಕ್ತಿ ಬಂದವರು ನನಗೆ ಮತವನ್ನು ಕೊಡಿ ಎಂದು ಕೇಳಿದ್ದಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಅವರು ಏನು ಹೇಳಿದರು ಎಂದರೆ, ಸ್ವಾಮಿ, ನೀವು ನನಗೆ ಒಂದು ಓಟನ್ನು ಕೊಟ್ಟರೆ ನಿಮಗೆ ಇಷ್ಟು ಸಹಸ್ರ ರೂಪಾಯಿಗಳನ್ನು ಕೊಡುತ್ತೇನೆ ಎಂದರು. ನಾನು ಅವರನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ನೀವು ನನಗೆ ದುಡ್ಡನ್ನು ಕೊಡುತ್ತೀರಾ? ನನ್ನನ್ನು ಅಷ್ಟು ಕೇವಲವಾಗಿ ತಿಳಿದುಕೊಂಡಿರಾ? ನೀವು ಯಾರ ಹತ್ತಿರ ಈ ಮಾತನ್ನು ಹೇಳುತ್ತಿದ್ದೀರೆಂದು ಗೊತ್ತಿದೆಯೆ? ಎಂದು ಹೇಳಿ ಛೀಮಾರಿ ಹಾಕಿ ಕಳುಹಿಸಿದೆ. ಅಂದರೆ ಅವರಿಗೆ ಒಳ್ಳೆಯ ಮಾತಿನಲ್ಲೇ ಹೇಳಿ ಕಳಿಸಿದೆ......

ಶ್ರೀ ಕೆ.ಹೆಚ್ ಶ್ರೀನಿವಾಸ್.—ಆ ಅಭ್ಯರ್ಥಿ ಗೆದ್ದರೆ?

ಶ್ರೀ ಎಂ.ಎಸ್.ಕೃಷ್ಣನ್.—ಅವರು ದುಡ್ಡು ಕೊಟ್ಟು ಓಟು ಹಾಕಿಸಿಕೊಂಡು ಗೆದ್ದರು. ಈಗ ಆ ವಿಚಾರ ಬೇಡ ಬಿಡಿ. ಸ್ವಾಮಿ ನಮ್ಮದು ವರ್ಗಸಮಾಜವಿರುವ ದೇಶವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತೀರಿ. ಶ್ರೀಮಂತ ವರ್ಗ ಬಡ ವರ್ಗವನ್ನು ಶೋಷಣೆ ಮಾಡುತ್ತದೆ ಎಂಬುದನ್ನು ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರೂ ಕೂಡ ಒಪ್ಪಿಕೊಳ್ಳುತ್ತಾರೆ.........

ಶ್ರೀ ಬಿ.ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣನ್‌ರವರು ನನ್ನನ್ನು ಏತಕ್ಕೆ ಸಾಕ್ಷಿಗೆ ಕರೆದರೋ ಗೊತ್ತಿಲ್ಲ, ವರ್ಗ ಸಮಾಜ ಎಂದರೆ ನಮ್ಮಲ್ಲಿ ಸಾಹುಕಾರರೂ ಇದ್ದಾರೆ, ಬಡವರೂ ಇದ್ದಾರೆ. ಈ ಇಬ್ಬರಲ್ಲೂ ಹೊಂದಾಣಿಕೆಯಾಗಿದೆ. ಆದರೆ ಈ ಕಮ್ಯುನಿಸ್ಟ್ ವಾದ ನಮ್ಮ ದೇಶಕ್ಕೆ ಅನ್ವಯಿಸುವುದಿಲ್ಲ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಬಡಿದಾಡುತ್ತಾರೆ, ಹೊಡೆದಾಡುತ್ತಾರೆ, ಆದರೆ ಅದರಿಂದ ಯಾವುದೇ ಸಮಾಜ ಸುಧಾರಣೆಯೂ ಆಗುವುದಿಲ್ಲ. ಯಾರೂ ಕೂಡ ಬದಲಾವಣೆಯಾಗುವುದಿಲ್ಲ. ಮಾನ್ಯ ಕೃಷ್ಣನ್‌ನವರಿಗೆ ತಮ್ಮ ನಾಯಕತ್ವವನ್ನು ಬೇರೆಯವರಿಗೆ ಬಿಟ್ಟು ಕೊಡುವುದಕ್ಕೆ ಇಷ್ಟವಿಲ್ಲ. ಕಳೆದ ಸುಮಾರು ೨೦ ವರ್ಷದಿಂದಲೂ ಅವರೇ ನಾಯಕರಾಗಿದ್ದಾರೆ. ಆದ್ದರಿಂದ ವಾದ ಮಾಡಲಿಕ್ಕೆ, ಮಾತನಾಡಲಿಕ್ಕೆ ಅವರು ಕಮ್ಯುನಿಸ್ಟ್ ಪಕ್ಷದವರು ಇದ್ದಾರೆಯೇ ವಿನಃ ಕಾರ್ಯಗತ ಮಾಡಲಿಕ್ಕೆ ಬರುವುದಿಲ್ಲ. ಅವರಿಗೆ ಜಾತಿ ವರ್ಗದ ಪ್ರಶ್ನೆಯೇ ಇರುವುದಿಲ್ಲ.

ಫಾರಿನ್ ಕಂಟ್ರಿಗಳಲ್ಲಿ ಇರುತ್ತದೆ. ಇಲ್ಲಿ ಮಾತ್ರ ಜಾತಿ ಗೊಂದಲ ಇದೆ. ಎಲ್ಲಿಯವರೆಗೆ ಜಾತಿ ಗೊಂದಲವಿರುತ್ತದೆಯೋ ಅಲ್ಲಿಯವರೆಗೆ ಈ ಕಮ್ಯುನಿಸ್ಟ್‌ನವರು ಒಬ್ಬರೊಬ್ಬರೇ ಎಲೆಕ್ಟ್ ಆಗಿ ಬರುವುದು. ಇವರು ಒಬ್ಬರಿಗಿಂತ ಹೆಚ್ಚು ಎಲೆಕ್ಟ್ ಆಗಿ ಬರುವುದೇ ಇಲ್ಲ. ಬಹುಸಂಖ್ಯೆಯಲ್ಲಿ ಎಲೆಕ್ಟ್ ಆಗಿ ಬಂದು ಈ ದೇಶದಲ್ಲಿ ಪಾರ್ಟಿ ಕಟ್ಟುವಂತೆಯೇ ಇಲ್ಲ. ಆದ್ದರಿಂದ ಅವರಲ್ಲಿ ನಾನು ಹೇಳುವುದು ಜಾತೀಯತೆಯನ್ನು ದಯವಿಟ್ಟು ಸಮಾಜದಲ್ಲಿ ಹೋಗಲಾಡಿಸಲು ಪ್ರಯತ್ನ ಮಾಡಿ ಎಂದು. ವರ್ಗ ಕಟ್ಟಿ, ವರ್ಗ ಇರತಕ್ಕಂಥ ಸಮಾಜವನ್ನು ಸೃಷ್ಟಿ ಮಾಡಿದರೆ ಆವಾಗ ನಿಮ್ಮ ಪಕ್ಷಕ್ಕೆ ಮೋಕ್ಷ ದೊರಕುತ್ತದೆ, ಇಲ್ಲದಿದ್ದರೆ ಅಲ್ಲಿಯವರೆಗೂ ಮೋಕ್ಷ ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್ —ಮಾನ್ಯ ಸದಸ್ಯರು ಬಹಳ ಕುತೂಹಲ ಕೆರಳಿಸುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ೨೦ ವರ್ಷಗಳಿಂದಲೂ ಈ ಪಾರ್ಟಿಯಲ್ಲಿಯೇ ಇದ್ದೇನೆ. ಅವರಿಗೆ ಈ ಪಕ್ಷದ ಚರಿತ್ರೆಯೇ ಗೊತ್ತಿಲ್ಲ. ಗೊತ್ತಿದಿದ್ದರೆ ಈ ರೀತಿ ಮಾತನಾಡುತ್ತಿರಲಿಲ್ಲ ಅದಕ್ಕೆ ಮಾನ್ಯ ಬಸವಲಿಂಗಪ್ಪನವರು ಬೂಸ ಬಸವಲಿಂಗಪ್ಪನವರು ಎಂದು ಹೆಸರು ಪಡೆದುಕೊಂಡರು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಸದಸ್ಯರು ಈವಾಗ ನಮಾಜ್ ಮಾಡುವುದಕ್ಕೆ ಹೊರಟಿದ್ದಾರೆ. ನಮಾಜ್ ಮಾಡಿ ಮಸೀದಿ ಮೇಲೆ ಹಾಕಿಕೊಳ್ಳುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದು ಸರಿಯಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಅವರು ಹೇಳಿದ್ದೂ ಸರಿಯಾಗಿದೆ ಇವರು ಹೇಳಿದ್ದೂ ಸರಿಯಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನಮಾಜ್ ಮಾಡುವುದಕ್ಕೂ ಹೋಗಲಿಲ್ಲ, ಏನು ಮಾಡುವುದಕ್ಕೂ ಹೋಗಲಿಲ್ಲ. ಈವತ್ತಿನ ದಿವಸ ಸಮಾಜ ಯಾವರೀತಿ ಹೋಗಿದೆ ಎಂದರೆ ಜಾತಿ ಮತ್ತು ವರ್ಗಗಳು ಎರಡೂ ಬಹಳ ಸಮ್ಮಿಳಿತವಾಗಿ ನಮ್ಮ ದೇಶದಲ್ಲಿ ಹೋಗುತ್ತಿದೆ. ಬೇರೆ ದೇಶಗಳಲ್ಲಿ ಈ ರೀತಿಯಾಗಿ ಇಲ್ಲ. ಕೆಲವು ಜಾತಿಗಳು ತೀರ ಶೋಷಣೆಗೆ ಒಳಗಾಗಿದ್ದಾರೆ.

ಅಧ್ಯಕ್ಷರು.—ವಿಷಯಕ್ಕೆ ಬನ್ನಿ.

ಶ್ರೀ ಎಂ.ಎಸ್. ಕೃಷ್ಣನ್.—ವರ್ಗ ಸಮಾಜದೊಳಗೆ ಒಂದು ವರ್ಗ–ಇನ್ನೊಂದು ವರ್ಗವನ್ನು ಶೋಷಿಸುತ್ತಿರುವ ಧೋರಣೆ ನಡೆದಿದೆ. ವರ್ಗ–ಸಮಾಜದಿಂದಲೇ ಈ ಪಕ್ಷಾಂತರ ನಡೆಯುತ್ತಿದೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಇನ್ನು ಮುಂದೆ ಒಬ್ಬೊಬ್ಬರೇ ಪಕ್ಷಾಂತರ ಮಾಡುವುದು ಬಿಟ್ಟು ಹೋಲ್‌ಸೇಲ್ ಪಕ್ಷಾಂತರ ಎಂದು ಮಾಡಿ ಎನ್ನುವಂತಿದೆ ನಿಮ್ಮ ದೃಷ್ಟಿಕೋನ ೫೦ ಪರ್ಸೆಂಟ್‌ಗಿಂತ ಜನ ಜಾಸ್ತಿ ಇದ್ದರೆ, ಮೂರನೆಯ ಒಂದು ಭಾಗ ಇದ್ದರೆ ಅದಕ್ಕೆ ಈವತ್ತು ಈ ದೇಶದಲ್ಲಿ ಮನ್ನಣೆ ಕೊಡುವ ರೀತಿಯಲ್ಲಿ ಅದು ನಡೆದಿದೆ. ಇಷ್ಟೆಲ್ಲ ಹೇಳಿದರೂ ಸಹ ಮೊನ್ನೆ ದಿವಸ ಕಾಂಗ್ರೆಸ್ 'ಐ' ಪಕ್ಷಕ್ಕೆ ಮಾನ್ಯ ಶರದ್ ಪವರ್‌ರವರು ಕಾಂಗ್ರೆಸ್ ಪಕ್ಷದಿಂದ ಪಕ್ಷಾಂತರ ಮಾಡಿದರಲ್ಲ, ಇದು ಎಂಥ ವಿಪರ್ಯಾಸ ನನಗಂತೂ ಗೊತ್ತಿಲ್ಲ. ಈ ವಿಪರ್ಯಾಸ ಹೋಗಬೇಕೆಂಬುದು ನನ್ನ ಅಭಿಪ್ರಾಯ. ಇದೊಂದು ನೈತಿಕ ಅಧಃಪತನ. ಯಾರೇ ಮಾಡಿರಲಿ ಆ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಸೂದೆಗಳಿಂದ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ಅನ್ನಿಸುತ್ತದೆ. ಈ ಮಸೂದೆಯಲ್ಲಿ ಇಷ್ಟು ಲಿಮಿಟ್ ಆಗಿಯಾದರೂ ಇದೆಯಲ್ಲ ಎಂದು ಸ್ವಾಗತಿಸುತ್ತೇನೆ. ಮಾನ್ಯ ಬಂಗಾರಪ್ಪನವರು ಚುನಾವಣೆ ಬಗ್ಗೆ ಹೆಂಡ ಸಾರಾಯಿ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಈಗ ಟಚ್ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವಾಗ ಅದನ್ನೆಲ್ಲ ಹೇಳಬಹುದು. ಜೊತೆಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಬಗ್ಗೆ ಬೇರೆ ಬಿಲ್ ಇದೆ. ಆಗ ಅದನ್ನೆಲ್ಲ ಹೇಳುತ್ತೇನೆ. ಪಕ್ಷಾಂತರ ಮಸೂದೆಯಲ್ಲಿ ಮಂಡಲ್ ಪಂಚಾಯತ್ ಬಗ್ಗೆ ಎಲ್ಲ ಹೇಳಿದ್ದೀರಿ. ಮಂಡಲ್ ಪಂಚಾಯಿತಿ ಚುನಾವಣೆಯನ್ನು ಪಕ್ಷಗಳ ಆಧಾರದ ಮೇಲೆ ಮಾಡಬಾರದೆಂದು ಹೇಳಿದರು. ಅದಕ್ಕೆ ನಾನು ವಿರೋಧ ಇದ್ದೇನೆ, ಮಂಡಲ ಪಂಚಾಯಿತಿಯಾಗಲಿ ಜಿಲ್ಲಾ ಪರಿಷತ್ ಆಗಲಿ ಯಾವುದೇ ಆಗಲಿ ರಾಜಕೀಯ ಪಕ್ಷಗಳ ಆಧಾರದ ಮೇಲೆ ಮಾಡುವುದು ಸರಿ ಎಂದು ನನ್ನ ಅಭಿಪ್ರಾಯ. ಚುನಾವಣೆಯಲ್ಲಿ ಧ್ಯೇಯ, ಧೋರಣೆ ಮೇಲೆ ಜನರು ಆರಿಸುತ್ತಾರೆ. ಇಲ್ಲದಿದ್ದರೆ ಸ್ವತಂತ್ರರು ಎಂದು ಅನೇಕ ಜನ ಅತಂತ್ರರು ಬರುತ್ತಾರೆ, ಬಂದು ಎಲ್ಲಿರುತ್ತಾರೆಂದು ಗೊತ್ತಾಗುವುದಿಲ್ಲ. ಹಾಗೆ ಮಾಡಿದ್ದರಿಂದ ತೊಂದರೆಗಳಾಗಿವೆ. ಈ ಚುನಾವಣೆಗಳಿಂದ ತಕರಾರು, ಜಗಳ, ಮರ್ಡರ್‌ಗಳು ಆಗಿವೆ ಎಂದು ವಿವರ ಕೊಟ್ಟರು. ಬಹುಶಃ ನನಗನ್ನಿಸಿದ ಮಟ್ಟಿಗೆ ಕೆಲವಡೆ ಈ ರೀತಿ ಆಗಿರಬಹುದು. ಹಾಗೆ ಆಗಿದ್ದರೂ ಕ್ರಮೇಣ ಕಡಿಮೆಯಾಗುತ್ತದೆ. ಪಶ್ಚಿಮ ಬಂಗಾಳ

ದಲ್ಲಿ, ಕೇರಳದಲ್ಲಿ ಮಂಡಲ ಪಂಚಾಯಿತಿ ಚುನಾವಣೆ ನಡೆದಿದೆ. ರಾಜಕೀಯ ಪಕ್ಷಗಳ ಆಧಾರದಲ್ಲಿ ನಡೆದಿದೆ ಶಾಂತರೀತಿಯಿಂದ ನಡೆದಿದೆ. ಆದ್ದರಿಂದ ಈ ರೀತಿ ಚುನಾವಣೆಗಳಲ್ಲೂ ಚಾಕು ಚೂರಿ ಹಾಕುತ್ತಾರೆ. ಬೀದಿ ಬೀದಿಗಳಲ್ಲಿ ಗಲಾಟೆಯಾಗುತ್ತದೆ. ಗ್ರಾಮ ಗ್ರಾಮಗಳಲ್ಲಿ ಗಲಾಟೆಯಾಗುತ್ತದೆಂಬ ತೀರ್ಮಾನಕ್ಕೆ ಬಂದರೆ ಅದು ಪ್ರಜಾಪ್ರಭುತ್ವಕ್ಕೆ ವಿರೋಧವಾಗುತ್ತದೆ. ಚುನಾವಣೆಗಳಲ್ಲಿ ಪ್ರಜಾಪ್ರಭುತ್ವ ಉಳಿಯಬೇಕೆಂದರೆ ರಾಜಕೀಯ ಪಕ್ಷಗಳ ಆಧಾರದ ಮೇಲೆ ಇರಬೇಕು. ವೈಯಕ್ತಿಕ ಬೆಂಬಲ, ಸಹಕಾರ ನೀಡಕೂಡದು ಎಂದು ನನ್ನ ಅಭಿಪ್ರಾಯ. ಮಂಡಲ ಪಂಚಾಯಿತಿ ಚುನಾವಣೆಯನ್ನು ರಾಜಕೀಯ ಪಕ್ಷಗಳ ಆಧಾರದ ಮೇಲೆ ಮಾಡುವುದು ಸರಿಯೇ ಹೊರತು ಬೇರೆ ಆಧಾರದ ಮೇಲೆ ಮಾಡುವುದು ಸರಿಯಲ್ಲ. ಪುಟ ೨ ಕ್ಲಾಜ್–೩ರಲ್ಲಿ ಏನು ಹೇಳುತ್ತದೆಂದರೆ.—

"೩. ಪಕ್ಷಾಂತರ ಆಧಾರದ ಮೇಲೆ ಅನರ್ಹತೆ.—(೧) ೪ನೇ ಪ್ರಕರಣದ ಉಪಬಂಧನಗಳಿಗೊಳಪಟ್ಟು, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಒಬ್ಬ ಕೌನ್ಸಿಲರು ಅಥವಾ ಒಬ್ಬ ಸದಸ್ಯನು

ಎ) ಅಂಥ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಅವನು ಸ್ವಇಚ್ಛೆಯಿಂದ ತ್ಯಜಿಸಿದರೆ, ಅವನು ಪಕ್ಷಾಂತರಿ, ಅಥವಾ

ಬಿ) ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಲ್ ಕೌನ್ಸಿಲ್, ಜಿಲ್ಲಾ ಪರಿಷತ್ತು ಅಥವಾ ಮಂಡಲ ಪಂಚಾಯಿತಿಯ ಯಾವುದೇ ಸಭೆಯಲ್ಲಿ, ಅವನು ಯಾವ ರಾಜಕೀಯ ಪಕ್ಷಕ್ಕೆ ಸೇರಿರುವನೋ ಆ ರಾಜಕೀಯ ಪಕ್ಷದಿಂದ ಅಥವಾ ಈ ಬಗ್ಗೆ ಅದು ಅಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರದಿಂದ ನೀಡಲಾದ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿ ಅವನು, ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೇ ಮತ ನೀಡಿದರೆ ಅಥವಾ ಮತ ನೀಡಲು ತಪ್ಪಿದರೆ ಮತ್ತು ಹಾಗೆ ಮತ ನೀಡಿದ ಅಥವಾ ನೀಡಲು ತಪ್ಪಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಹಾಗೆ ಮತ ನೀಡಿರುವುದನ್ನು ಅಥವಾ ನೀಡಲು ತಪ್ಪಿದುದನ್ನು ಮನ್ನಿಸದಿದ್ದರೆ, ಎಂದು ಎರಡು ಇದೆ.

ವಿರುದ್ಧವಾಗಿ ಮತ ನೀಡಿದ್ದರೆ ಅದನ್ನು ೧೫ ದಿನಗಳೊಳಗೆ ತಿಳಿಸದಿದ್ದರೆ ಅವನು ಪಕ್ಷಾಂತರಿ ಆಗುತ್ತಾನೆ. ಆ ಎರಡರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಯಾವುದೇ ಕಾರಣದಿಂದ ರಾಜಕೀಯ ಪಕ್ಷದಿಂದ ಹೊರಹಾಕಿದ್ದೇವೆ ಅನ್ನಿ. ಅದಕ್ಕೆ ಈ ಎರಡೂ ಕಾರಣಗಳು ಇಲ್ಲದೆ ಇರಬಹುದು. ಅವನು ಒಂದು ಸಾರಿ ಓಟು ಮಾಡಿರಬಹುದು. ಯಾವುದೇ ಕಾರಣದಿಂದ ಒಂದು ಸಂದರ್ಭದಲ್ಲಿ ಒಬ್ಬ ಪಕ್ಷದ ಸದಸ್ಯರನ್ನು ಹೊರಹಾಕಿದ್ದೇವೆ, ರಿಮೂವ್ ಮಾಡಿದ್ದೇವೆ ಅಂದರೆ ಅವನ ಪರಿಸ್ಥಿತಿ ಏನಾಗುತ್ತದೆ ? ಅಂಥವರಿಗೆ ಮತ್ತೆ ಪಕ್ಷದಲ್ಲಿ ಮುಂದುವರಿಯುವುದಕ್ಕೆ ಅವಕಾಶ ಇರಬೇಕೆ ? ಈ ಆ್ಯಕ್ಟ್ ಪ್ರಕಾರ ಅಂತಹವರನ್ನು ಪಕ್ಷದ ಸದಸ್ಯ ಎಂದು ಪರಿಗಣಿಸಲಾಗಿದೆ. ಇದು ಸರಿಯಲ್ಲ. ಅವನು ಸೀಸ್ ಆಗಬಾರದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಡಿಸ್‌ಕ್ವಾಲಿಫೈ ಮಾಡತಕ್ಕ ಸಮಸ್ಯೆ ಇನ್ನೂ ಒದಗಿಲ್ಲ. ಅಲ್ಲಿ ನಡೆಯತಕ್ಕ ಚಟುವಟಿಕೆಗಳಿಗೆ ಯಾವುದೋ ಒಂದು ಪಕ್ಷದ ರಾಜಕಾರಣವನ್ನು ಆಧಾರವಾಗಿಟ್ಟುಕೊಂಡಿರುತ್ತಾರೆ. ಸಸ್ಪೆಂಡ್ ಮಾಡಿ, ತೆಗೆಯಿರಿ ಎಂದರೆ ಕಾನೂನು ದೃಷ್ಟಿಯಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ ಪಾರ್ಟಿಯವರು ಅವರ ಪಕ್ಷದಿಂದ ಕಿತ್ತು ಹಾಕುತ್ತಾರೆ. ಕಮ್ಯುನಿಸ್ಟ್ ಪಕ್ಷದವರು ನನ್ನನ್ನು ಕಿತ್ತು ಹಾಕುತ್ತಾರೆ ಎಂದು ಇಟ್ಟುಕೊಳ್ಳಿ. ಪಕ್ಷದಿಂದ ಕಿತ್ತು ಹಾಕಿರುವ ಬಗ್ಗೆ ಅಧ್ಯಕ್ಷರಿಗೆ ತಿಳುವಳಿಕೆ ಕೊಡುತ್ತಾರೆ. ಆಗ ನಾನು ಬಂದು ಸದಸ್ಯ ಎಂದು ಕ್ಲೈಮ್ ಮಾಡುವುದಕಾಗುತ್ತದೆಯೆ ? ನೈತಿಕವಾಗಿ ಮತ್ತು ಕಾನೂನು ರೀತ್ಯ ಕ್ಲೈಮ್ ಮಾಡುವುದಕ್ಕಾಗುವುದಿಲ್ಲ. ಆ ಪ್ರಶ್ನೆಯೇ ಬರುವುದಿಲ್ಲ. ಈ ಮಸೂದೆಯಲ್ಲಿ ಇಂತಹ ಸನ್ನಿವೇಶದಲ್ಲಿ ಪಕ್ಷದಲ್ಲೇ ಇರುವ ಅವಕಾಶವಿದೆ ಎಂದು ನನ್ನ ಅಭಿಪ್ರಾಯ. ಅಥವಾ ಅವಕಾಶ ಕೊಡಕೂಡದು ಎಂಬುದು ನನ್ನ ಅಭಿಪ್ರಾಯ. ಮಸೂದೆಯಲ್ಲಿ ಈ ಅಂಶದ ಬಗ್ಗೆಯೂ ತಿದ್ದುಪಡಿ ಇದ್ದರೆ ಒಳ್ಳೆಯದು. ಸದಸ್ಯರಾದವರು ಹುಷಾರಾಗಿರಬೇಕಾಗುತ್ತದೆ. ಸರಿಯಾಗಿ ನಡೆದುಕೊಳ್ಳಬೇಕಾಗುತ್ತದೆ, ನೀತಿಗೆ ವಿರೋಧವಾಗಿ ಹೋಗುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿ ಬರುತ್ತದೆ. ಆ ದೃಷ್ಟಿಯಿಂದ ಇದು ಒಳ್ಳೆಯ ಮಸೂದೆ. ಆದ್ದರಿಂದ ನಾನು ಹೇಳಿದ ಅಂಶವನ್ನೂ ಸೇರಿಸಿಕೊಳ್ಳಬೇಕೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ಕೃಷ್ಣನ್ ಅವರೇ, ಮುಕ್ತಾಯ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನೇನು ಹೆಚ್ಚು ಹೊತ್ತು ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು.—೨೦ ಮಿನಿಟ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದು ವಿಷಯ ಏನೆಂದರೆ ಮೂರನೇ ಪುಟದಲ್ಲಿ "ಇತರ ಯಾವುದೇ ಸಂದರ್ಭದಲ್ಲಿ, ಅವನು ಮಂಡಲ ಪಂಚಾಯಿತಿಯ ಸದಸ್ಯನಾಗಿ ನಾಮ ನಿರ್ದೇಶಿತನಾದ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ಅವನು ಯಾವ ರಾಜಕೀಯ ಪಕ್ಷಕ್ಕೆ ಸದಸ್ಯನಾಗುವನೋ ಆ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು" ಎಂದು ಹೇಳಿದೆ. ಇವತ್ತಿನ ದಿವಸ ಒಬ್ಬ ಸ್ವತಂತ್ರವಾಗಿರುವವನು ೬ ತಿಂಗಳೊಳಗೆ ಬೇರೊಂದು ಪಕ್ಷವನ್ನು ಸೇರಿಕೊಳ್ಳ ಬಹುದು ಎಂಬ ಅಭಿಪ್ರಾಯ ಬರುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾಮಿನೇಟ್ ಆಗಿರುವವರಿಗೆ ಅದು.

ಶ್ರೀ ಎಂ.ಎಸ್. ಕೃಷ್ಣನ್.—ಇಂಗ್ಲೀಷಿನಲ್ಲಿ ಈ ರೀತಿ ಇದೆ.

"(b) a nominated member of a Mandal Panchayat shall,—

(i) where he is a member of a political party on the date of his nomination as such member, be deemed to belong to such political party ; or

(ii) in any other case, be deemed to belong to the political party of which he becomes a member before the expiry of six months from the date on which he is nominated as a member of the Mandal Panchayat"

SRI ABZUL NASIR SAB.—He cannot become a member after 6 months.

SRI M.S. KRISHANAN.—that means the right to nominate an independent as a Member of the Mandal Panchayat is given.

ಶ್ರೀ ಅಬ್ದುಲ್ ನಜೀರ್ ಸಾಬ್.—ಸೆಂಟ್ರಲ್ ಆಕ್ಟ್ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಹೇಳಿ ನಮ್ಮ ಬಾಯಿ ಮುಚ್ಚಿಸಿದರೆ ಕುಳಿತುಕೊಳ್ಳುತ್ತೇನೆ. ನಾನು ಅದರಲ್ಲಿ ನೋಡಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಮೊದಲೇ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದೆ. ಸಂಸತ್ತು ಏನು ಶಾಸನವನ್ನು ಒಪ್ಪಿಕೊಂಡಿದೆಯೋ ಆ ಎಲ್ಲಾ ಪ್ರಾವಿಷನನ್ನೂ ಈ ಶಾಸನದಲ್ಲಿ ಹಾಕಿ ಕೊಂಡಿದ್ದೇವೆ ಎಂದು ಹೇಳಿದ್ದೇನೆ. ಒಂದು ಬದಲಾವಣೆ ಏನೆಂದರೆ ಮೂರನೇ ಒಂದು ಭಾಗ ಪಕ್ಷ ದಿಂದ ಪಕ್ಷಾಂತರ ಆದರೆ ಪಕ್ಷಾಂತರ ಅಲ್ಲ ಎಂದು ಅದರಲ್ಲಿದೆ. ಇಲ್ಲಿ ಅರ್ಧದಷ್ಟು ಎಂದು ಹಾಕಿದೆ. ಇದೊಂದೇ ಹೊಸ ಕ್ಲಾಸ್. ಇನ್ನೇನೂ ಹೊಸದಾಗಿ ಸೇರಿಸಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಇದರಿಂದಾಗಿ ಸ್ವತಂತ್ರರಿಗೆ ಹೆಚ್ಚು ಅವಕಾಶಮಾಡಿ ಕೊಡುವುದಕ್ಕೆ ಅವಕಾಶವಾಗುವುದಿಲ್ಲವೇ ಎಂಬುದು ನನ್ನ ಪ್ರಶ್ನೆ. ಇದು ಸರಿಯಾದುದಲ್ಲ ಎಂಬುದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ನೀವು ೫೦ ಪರ್ಸೆಂಟ್ ಎಂದು ಹೇಳುವುದು ಬೇರೆ. ಇಂಗ್ಲೀಷಿನಲ್ಲಿ ಮತ್ತು ಕನ್ನಡದಲ್ಲಿ ಬೇರೆ ರೀತಿ ಇದೆ. ಇಂಗ್ಲೀಷಿನಲ್ಲಿ ಹೀಗಿದೆ. Secondly that Person has got to exercise the right to join the Party or not to join the party within six months.

SRI ABDUL NAZIR SAB.—No change has been made. What the parliament has codified, we have accepted it.

SRI M.S. KRISHANAN.—In English, version, it reads thus: A nominated member of a Mandal Panchayat shall be disqualified for being a member of the Mandal Panchayt......

ಶ್ರೀ ಅಬ್ದುಲ್ ನಜೀರ್ ಸಾಬ್.—ಕನ್ನಡದಲ್ಲಿ ಇದೆ ನೋಡಿ.

ಶ್ರೀ ಎಂ.ಎಸ್. ಕೃಷ್ಣನ್.—ಗೌರ್ನರ್ ಅವರಿಗೆ ಯಾವುದನ್ನು ಕಳುಹಿಸಿಕೊಡುತ್ತೀರಿ ? ಗೌರ್ನರ್‌ಗೆ ಅಸೆಂಟ್‌ಗಾಗಿ ಯಾವುದನ್ನು ಕಳುಹಿಸುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಕನ್ನಡ.

ಶ್ರೀ ಎಂ.ಎಸ್. ಕೃಷ್ಣನ್.—ಅವರಿಗೆ ಕನ್ನಡ ಗೊತ್ತಿರಬೇಕಲ್ಲ ಈ ಒಂದು ತಿದ್ದುಪಡಿಯು ಪುಟ ೬ರಲ್ಲಿ ಪ್ರಸ್ತಾಪ ಮಾಡಿದ್ದರ ಬಗ್ಗೆ ಶ್ರೀಮಾನ್ ಬಂಗಾರಪ್ಪನವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ಬಹಳ ವಿಶಾಲವಾಗಿದೆ ಎಂಬುದು ನನ್ನ ಅಭಿಪ್ರಾಯ. ಅದರಲ್ಲಿ ಏನು ಹೇಳಿದ್ದಾರೆಂದರೆ.—

> "ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಮೇಲೆ ಪ್ರತಿಷೇದ,—ಯಾವುದೇ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಕೌನ್ಸಿಲರ್ ಅಥವಾ ಸದಸ್ಯನ ಅನರ್ಹತೆಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧ ಪಟ್ಟಂತೆ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ."

ಇದು ರಾಜ್ಯಾಂಗದ ರೈಟ್ಸ್‌ಗೆ ವಿರುದ್ಧವಾದುದಾಗಿದೆ. ಯಾವುದೇ ನ್ಯಾಯಾಲಯು ಅಧಿಕಾರ ಹೊಂದಿಲ್ಲ ಅಂದರೆ ಹೇಗೆ ? ಅವರು ೨೪ ಗಂಟೆಗಳಲ್ಲಿ ಕಳುಹಿಸಿಕೊಡಬೇಕು. ನಂತರ ಮೇಲಿನ ಅಧಿಕಾರಿಗಳು ಆ ವಿಚಾರವನ್ನು ೭ ದಿವಸಗಳಲ್ಲಿ ತೀರ್ಮಾನ ಮಾಡತಕ್ಕದ್ದು ಅಂತ ಇದೆ. ಇದು ಒಂದು ಪ್ರಶ್ನೆ

SRI ABDUL NAZIR SAB.—I will read out the original Act.

> "Notwithstanding anything contained in this constitution no Court shall have any jurisdiction in respect of any matter connected with the disqualification of a member of the House......"

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ರೀತಿ ಹೇಳುವುದು ಯಾವಾಗ? if the supermacy lies with the representatives of the people ಪಾರ್ಲಿಮೆಂಟಿನಲ್ಲಿ ಹಾಗೂ ಲೆಜಿಸ್ಲೇಚರ್‌ನಲ್ಲಿ ಆ ರೀತಿಯ ಹಕ್ಕನ್ನು ಚಲಾಯಿಸತಕ್ಕ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ. it shows the immunity. ಆ ರೀತಿ ಜಿಲ್ಲಾಪರಿಷತ್ತಿಗೋ ಅಥವಾ ಮಂಡಲ್ ಪಂಚಾಯಿತಿಗೋ ಕೊಟ್ಟಿಲ್ಲ. ಆ ಎಲ್ಲ ಅಧಿಕಾರವನ್ನು ಎಕ್ಸಿಕ್ಯೂಟಿವ್ ಹೆಡ್ಸ್‌ಗೆ ಕೊಟ್ಟಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲಿ ಅಧ್ಯಕ್ಷರು ಇದ್ದಾರೆ. ಪಾರ್ಲಿಮೆಂಟ್‌ನಲ್ಲೂ ಅಷ್ಟೆ. ಆದರೆ ಜಿಲ್ಲಾ ಪರಿಷತ್ತಿನಲ್ಲಿ ಅಧ್ಯಕ್ಷರು ಆ ರೀತಿ ಮಾಡುವುದಕ್ಕಾಗುವುದಿಲ್ಲ. ಏಕೆ ಅಂದರೆ ಅವರು ಒಂದು ರಾಜಕೀಯ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಆದ್ದರಿಂದ ಕೆಲವು ಈ ರೀತಿಯ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂತಹ ಅಧಿಕಾರವನ್ನು ಎಕ್ಸಿಕ್ಯೂಟೀವ್ ಹೆಡ್ಸ್‌ಗೆ ಕೊಟ್ಟಿದ್ದೀರಿ.

SRI ABDUL NAZEER SAB.—Do you want me to entrust thi to the Zilla Parishad?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಯಾವುದೇ ರೀತಿಯ ತಪ್ಪನ್ನು ಮಾಡಿರಲಿ. ಜನತಾ ಪ್ರತಿನಿಧಿಗಳು ೨೦ ಪರ್ಸೆಂಟ್ ತಪ್ಪು ಮಾಡಿದರೂ ಸರಿ. ಆದರೆ ಎಕ್ಸಿಕ್ಯೂಟೀವ್ ಅದನ್ನು ಮಾಡ ಬಾರದು. You can give that immunity to the elected body which is democratically elected. ಆ ಇಮ್ಯುನಿಟೀಸನ್ನು ಅಲ್ಲಿಗೆ ಕೊಡಬೇಡಿ. ಕೊಡುವು ದಾದರೆ ಕೋರ್ಟಿಗೆ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಬ್ಯುರೋಕ್ರಸಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಏಕೆ ಕೊಟ್ಟಿದ್ದೀರಿ ಎಂಬ ಪ್ರಶ್ನೆ ಬರುತ್ತದೆ. ಯಾವ ತೀರ್ಮಾನದ ಆಧಾರದ ಮೇಲೆ ಈ ರೀತಿಯ ಅಧಿಕಾರವನ್ನು ಕೊಟ್ಟಿದ್ದೀರಿ? ಈ ತಿದ್ದುಪಡಿಯ ೪ನೇ ಕ್ಲಾಸ್‌ನಲ್ಲಿ ಯಾರ್ಯಾರಿಗೆ ಅಧಿಕಾರವನ್ನು ಕೊಡಲಾಗುವುದು ಎಂಬುದನ್ನು ತಿಳಿಸಿದ್ದೀರಿ.

(೧) ಜಿಲ್ಲಾ ಪರಿಷತ್ತಿನ ಸಂದರ್ಭದಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ,

(೨) ಮುನಿಸಿಪಲ್ ಕಾರ್ಪೊರೇಷನ್ನಿನ ಸಂದರ್ಭದಲ್ಲಿ–ವಿಭಾಗೀಯ ಕಮೀಷನರಿಗೆ.

(೩) ನಗರ ಅಥವಾ ಪಟ್ಟಣ ಮುನಿಸಿಪಲ್ ಕೌನ್ಸಿಲ್ಲಿನ ಸಂದರ್ಭದಲ್ಲಿ-ಡೆಪ್ಯುಟಿ ಕಮೀಷನರಿಗೆ

(೪) ಮಂಡಲ ಪಂಚಾಯಿತಿಯ ಸಂದರ್ಭದಲ್ಲಿ–ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಎಂಬುದಾಗಿ ತಿಳಿಸಿದ್ದೀರಿ.

ಈ ರೀತಿಯ ದೂರನ್ನು ೨೪ ಗಂಟೆಗಳೊಳಗಾಗಿ ಕಳುಹಿಸಬೇಕು. ಸಂಬಂಧಪಟ್ಟವರು ಅದನ್ನು ೭ ದಿವಸಗಳೊಳಗಾಗಿ ತೀರ್ಮಾನ ಮಾಡಬೇಕೆಂಬ ಅಧಿಕಾರವನ್ನು ಎಕ್ಸಿಕ್ಯುಟೀವ್ ಹೆಡ್ಸ್‌ಗೆ ಕೊಟ್ಟಿದ್ದೀರಿ. ಇಂತಹವರಿಗೆ ಅಧಿಕಾರವನ್ನು ಕೊಟ್ಟು ಅವರು ಸರಿಯಾಗಿ ಮಾಡುತ್ತಿದ್ದಾರೆಂದು ತಿಳಿದುಕೊಂಡು, ಅದನ್ನು ಯಾವ ಕೋರ್ಟಿನಲ್ಲೂ ಕೇಳುವ ಹಾಗೆ ಇಲ್ಲ ಅಂದರೆ ನನಗೆ ಅನ್ನಿಸುತ್ತದೆ, ಇದು ಪ್ರಜಾಪ್ರಭುತ್ವ ತತ್ವಗನುಗುಣವಾಗಿಲ್ಲ ಎಂದು,

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲಿ ಅಧ್ಯಕ್ಷರು ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಅಡ್ಮಿನಿಸ್ಟ್ರೇಟೀವ್ ಪವರ್‌ನ್ನು ಈ ರೀತಿ ಕೊಟ್ಟಿದ್ದಾರಾ? Executive heads will not give justice at all,

SRI ABDUL NAZIR SAB.—Speaker is not the executive head. So, also the head of the Zilla Parishad. He is a political executive and you want us to pass on the judicial powers to the political executive.

SRI M.S. KRISHNAN.—What is wrong in it? If you hand it over to the bureaucracy, they will play havoc. ಇಷ್ಟು ಮಾತ್ರ ಹೇಳಿ ಬೇರೆ ವಿಷಯಗಳು, ಮೂಲ ತತ್ವದ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ ಎಂದು ಹೇಳಿ ಇದನ್ನು ನಾನು ಸ್ವಾಗತಿಸುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಪಕ್ಷಾಂತರ ನಿರೋಧ ಮಂಡಲ ಪಂಚಾಯಿತಿ ಹಾಗೂ ಜಿಲ್ಲಾ ಮಂಡಲಗಳ ಕಾಯ್ದೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಪ್ರಸ್ತುತ ರಾಷ್ಟ್ರೀಯ ಮಟ್ಟದಲ್ಲಿ ಲೋಕಸಭಾ ಸದಸ್ಯರಿಗೆ ಸಂಬಂಧಪಟ್ಟಹಾಗೆ ಪಕ್ಷಾಂತರ ನಿಷೇಧ ಮಾಡುವ ಕಾಯ್ದೆ ಇದೆ. ರಾಜ್ಯ ಮಟ್ಟದಲ್ಲಿ ನಾವು ಪಕ್ಷಾಂತರ ಮಾಡಿದರೆ ಅದನ್ನು ವಿರೋಧ ಮಾಡುವ ಕಾಯ್ದೆ ಇದೆ. ಅದನ್ನು ಅನುಸರಿಸಿ ಈ ದಿವಸ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ಸದಸ್ಯರು ಪಕ್ಷಾಂತರ ಮಾಡಬಾರದು ಎನ್ನುವ ದೃಷ್ಟಿಯಿಂದ ಈ ಕಾಯ್ದೆಯನ್ನು ತಂದಿದ್ದಾರೆ. ವಿರೋಧಪಕ್ಷದ ನನ್ನ ಸ್ನೇಹಿತರು ಒಟ್ಟಾರೆ ಈ ಕಾಯ್ದೆಯನ್ನು ಸ್ವಾಗತಿಸಿದ್ದಾರೆ. ಹಾಗೂ ಅದರಲ್ಲಿ ಇರುವ ಕೆಲವು ನ್ಯೂನ್ಯತೆಗಳನ್ನು ಗಮನಕ್ಕೆ ತಂದಿದ್ದಾರೆ. ಮೂಲತಃ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಪಕ್ಷಾಂತರ ವಿರೋಧ ಮಾಡುವ ಕಾಯ್ದೆಯನ್ನು ತರುವ ಅವಕಾಶವನ್ನು, ಪರಿಸ್ಥಿತಿಯನ್ನು, ಪರಿಸರವನ್ನು ಯಾವಾಗ ಸೃಷ್ಟಿಸಿದ್ದಾರೆ, ಏಕೆ ಸೃಷ್ಟಿಸಿದ್ದಾರೆ, ಯಾರಿಂದ ಸೃಷ್ಟಿಯಾಯಿತು ಎನ್ನುವುದು ಮೂಲಭೂತ ಪ್ರಶ್ನೆ. ಉತ್ತರ ಇಷ್ಟೇ, ನಮ್ಮಿಂದಲೇ. ನಾವೇ ಇದಕ್ಕೆ ಕಾರಣಕರ್ತರು. ನಮ್ಮ ಹಿರಿಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುವಾಗ ನಾನು ಕುಳಿತು ಕೇಳಿದೆ. ಉದಾಹರಣೆಗೆ ನಾವೇ ಇರಬಹುದು. ಚುನಾವಣೆಗಳು ನಡೆಯುವಾಗ ನಾವು ನಡೆದುಕೊಳ್ಳುವ ರೀತಿ, ನಾವು ಚುನಾವಣೆ ಗೆಲ್ಲುವುದಕ್ಕೆ ಹಾಕಿಕೊಳ್ಳುವ ಕಾರ್ಯವೈಖರಿ ಬಹುಶಃ ಬಂಗಾರಪ್ಪನವರಿಗೆ ಎಷ್ಟು ನೋವನ್ನು ತಂದಿದೆ ಅವಕ್ಕಿಂತ ೧೦೦ರಷ್ಟು ನೋವು ನನಗೂ ಆಗಿದೆ. ಹಿಂದೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಾಡು, ಹೆಂಡವನ್ನು ಪೂರ್ತಿಯಾಗಿ ಹಂಚಿದ್ದನ್ನು ನಾನು ಕೂಡಾ ನೋಡಿ ಅವರಿಗಿಂತ ಹೆಚ್ಚು ಮನ ನೊಂದಿದ್ದೇನೆ. ಈ ಚಿತ್ರವನ್ನು ಕಂಡಾಗ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಇರುವ ಪ್ರಶ್ನೆ ಎಂದರೆ, ಇದಕ್ಕೆ ಯಾರು ಕಾರಣ? ಅಧ್ಯಕ್ಷರೇ, ಇಂತಹ ಚುನಾವಣೆ ಗೆಲ್ಲಬೇಕು ಎನ್ನುವ ಆಸೆ ಆಕಾಂಕ್ಷೆ, ಮನಸ್ಸು ನನಗಂತೂ ಇಲ್ಲ. ನಮ್ಮವರು ಯಾರೂ ಮಾಡಿಲ್ಲ ಎನ್ನುವ ದಡ್ಡತನ ಕೂಡಾ ಇಲ್ಲ. ಚುನಾವಣೆಗೆ ೧೫ ದಿವಸಕ್ಕೆ ಮುಂಚೆ ಹಂಡೇನಲ್ಲಿ ಹೆಂಡ, ಮಂಕ್ರೀನಲ್ಲಿ ಬಾಡನ್ನು ಹಂಚಿದ್ದನ್ನು ನೋಡಿದರೆ ಯಾರು ಅದನ್ನು ಸೃಷ್ಟಿ ಮಾಡಿದ್ದಾರೆಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ಕುಡಿಸಿದ ರಾಜಕಾರಣಿಗಳು ಕಾರಣರೇ ಅಥವಾ ಕುಡಿದ ಮತದಾರರು ಕಾರಣರೇ? ಇದನ್ನು ನಿಲ್ಲಿಸ ಬೇಕಾದವರು ಯಾರು? ಇದನ್ನು ಕುಡಿಯುವ ಮತದಾರರು, ಕುಡಿಸುವ ರಾಜಕಾರಣಿಗಳು ನಿಲ್ಲಿಸ ಬೇಕು. ಇಂತಹ ಒಂದು ಕೆಟ್ಟ ವ್ಯವಸ್ಥೆಯನ್ನು, ಕೆಟ್ಟ ಪರಿಸ್ಥಿತಿಯನ್ನು ಸೃಷ್ಟಿ ಮಾಡಿರುವುದರಿಂದ ಈ ಪಕ್ಷಾಂತರ ಕಾಯ್ದೆಯನ್ನು ತರಬೇಕಾಯಿತು.

ಶ್ರೀ ಪಂಪಾಪತಿ.—ಈ ಸರ್ಕಾರ ಆಳುತ್ತಾ ಇದ್ದಾರಲ್ಲಾ ಅವರು ಕಾರಣ.

ಶ್ರೀ ವೈ.ಕೆ. ರಾಮಯ್ಯ.—ವಿರೋಧ ಪಕ್ಷದಲ್ಲಿ ಇದ್ದಾಗ ನಾನೂ ಕೂಡಾ ಇದೇ ರೀತಿ ಹೇಳುತ್ತಾ ಇದ್ದೆ. ಸಾರ್ವಜನಿಕ ಜೀವನದಲ್ಲಿ ಹೆಂಡವನ್ನು ಹಂಚಿ, ಜಾತಿಯ ಹೆಸರಿನಲ್ಲಿ ಓಟನ್ನು ಪಡೆಯುವ ವ್ಯವಸ್ಥೆಯನ್ನು, ಒಬ್ಬ ಅಭ್ಯರ್ಥಿಯನ್ನು ಮನೆಯೊಳಗೆ ಕೂಡಿಹಾಕಿ ತಮಗೆ ಬೇಕಾದ ಅಭ್ಯರ್ಥಿಯನ್ನು ಚುನಾಯಿಸುವ ವ್ಯವಸ್ಥೆಯನ್ನು ಅಥವಾ ತಿಂಗಳುಗಟ್ಟಲೇ ಟೂರ್‌ಗೆ ಕರೆದುಕೊಂಡು ಹೋಗಿ ಮೋಜವಾನಿ ಮಾಡಿಸಿ ಓಟನ್ನು ಪಡೆದುಕೊಳ್ಳುವ ಪರಿಸ್ಥಿತಿಯನ್ನು, ಕ್ಷುಲ್ಲಕ ಸಾರ್ವಜನಿಕ ವ್ಯವಸ್ಥೆಯಲ್ಲಿ ಆಯಾರಾಮ್ ಗಯಾರಾಮ್ ರಾಜಕೀಯ ಜೀವನದಲ್ಲಿ ಪಕ್ಷಾಂತರವನ್ನು ಸೃಷ್ಟಿ ಮಾಡುವ ಪರಿಸ್ಥಿತಿಯಲ್ಲಿ ನಾವು ಈ ಒಂದು ಮಸೂದೆಯನ್ನು ಎಲ್ಲಾ ಮಟ್ಟದಲ್ಲಿ ತರುವ ಅವಶ್ಯಕತೆ ಇದೆ. The moral standard, and the public morality has been degenerated to the lowest denomination. This degeneration of the public morality in the public life in this country has forced us to bring this Anti-defection Bill at National level. State level and now at the Panchayat level. ಆದುದರಿಂದ ಬಹುಶಃ ನನ್ನ ಮಿತ್ರರು ಕಾಯಿದೆಯನ್ನು ವಿರೋಧಿಸುವಂತಹ ಕೆಲಸವನ್ನು ಮಾಡಲಾರರು ಎಂದು ನಾನು ಸ್ವಾಗತಿಸುತ್ತೇನೆ. ಈ ಕಾಯಿದೆಗೆ ಸಂಬಂಧಪಟ್ಟಹಾಗೆ ೨-೩ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೊಟ್ಟ ಮೊದಲನೆಯದಾಗಿ ಕೆಲವು ತಾತ್ವಿಕವಾದ ವಿಷಯಗಳು, ಕೆಲವು ಕಾನೂನಿಗೆ ಸಂಬಂಧಪಟ್ಟವುಗಳು Bar of jurisdiction of the court ಮಾನ್ಯ ಹಿರಿಯ ಸದಸ್ಯರಾದ ವೀರಪ್ಪಮೊಯಿಲಿಯವರು ಮಾತನಾಡಿದ್ದಾರೆ. ಅದಕ್ಕೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೇರವಾದ ಪ್ರಶ್ನೆ ಇಷ್ಟೆ ಪ್ರಾವಿಜನ್, ಈ ಒಂದು ಕಾನೂನು ನಿಯಮದಲ್ಲಿ ಲೋಕಸಭೆಗೆ ಇರುವುದಾದರೆ ವಿಧಾನಸಭೆಗೆ ಇರುವುದಾದರೆ, ನಮ್ಮ ಮಿತ್ರರೇ ಇರತಕ್ಕ ಜಿಲ್ಲಾ ಪರಿಷತ್ತಿಗೆ, ಮಂಡಲ ಪಂಚಾಯಿತಿಗೆ ಏತಕ್ಕೆ ಇರಬಾರದು? ಅಲ್ಲೂ ಕೂಡ ಹೌಸ್ ಇದೆ. ಈ ಕಾಯಿದೆಯಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. There is a House. Who told you that there is no House? Zilla parishad itself is a House. The Mandal Panchayat is a House. There is also a President. There is also a Chairman. If the Bar of jurisdiction of the Court is relevant, if it is subject to scrutiny of the Court for the National level, for the State level then why not it should be for the Panchayat level. ಇದೇ ಒಂದು ನಿಯಮವನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಗೆ ಅಳವಡಿಸಿಕೊಂಡರೆ ತಪ್ಪಾಗುವುದಿಲ್ಲ. ನಾನು ಕೂಡ ಲಾಯರ್ ಆಗಿ ೧೬ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಆ ಪ್ರಾವಿಜನ್ ಕಾನೂನಿಗೆ ವಿರೋಧವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕಾನೂನಿಗೆ ವಿರೋಧವೆಂದು ಯಾರೂ ಹೇಳಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ಪಕ್ಷದಿಂದ ಹೊರಗೆ ಹಾಕಿದಾಗ ಏನಾಗಬಹುದು ಎನ್ನುವ ಪ್ರಶ್ನೆಯನ್ನು ಮಾನ್ಯ ಕೃಷ್ಣನ್‌ರವರು ಮತ್ತು ಇತರರು ಮಾತನಾಡಿದಾಗ ನಾನು ಯೋಚನೆ ಮಾಡಿದೆ. ನಾನು ಇದನ್ನು ಓದುವಾಗ ನನ್ನ ತಲೆಗೆ ಬಂತು, ಯಾವ್ಯಾವುದು ಡಿಸ್‌ಕ್ವಾಲಿಫಿಕೇಶನ್ ಆಗುತ್ತದೆ. If he ceases to be a Member, If he wants to be absent from voting

ಪಕ್ಷದಿಂದ ತೆಗೆದುಹಾಕಿದರೆ ಏನಾಗಬಹುದೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ನಮ್ಮ ಪಕ್ಷದಿಂದ ನನ್ನನ್ನು ತೆಗೆದುಹಾಕಬಹುದು ಅದು ಕೇವಲ ಒಂದು ತಾತ್ವಿಕವಾದ ಆಧಾರದ ಮೇಲೆ ಪಕ್ಷದ ತತ್ವಕ್ಕೆ ವಿರೋಧವಾಗಿ ಕೆಲಸ ಮಾಡಿದಾಗ ತೆಗೆದುಹಾಕುತ್ತಾರೆ. ಯಾವುದೋ ಒಂದು ಕಾನೂನನ್ನು ತರುತ್ತಾರೆ, ವೈಯುಕ್ತಿಕವಾಗಿ ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ. ಸರ್ಕಾರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಪಕ್ಷವನ್ನು ರಾಷ್ಟ್ರ ಮಟ್ಟದವರೆಗೆ ಬೆಳೆಸಿಕೊಂಡು ಹೋಗುವ ದೃಷ್ಟಿಯಿಂದ, ರಾಜಕೀಯ ದೃಷ್ಟಿಯಿಂದ ಮಾಡುವುದಿಲ್ಲ. ಕಾನೂನು ನಿಯಮ, ಸಿದ್ಧಾಂತ ಒಳ್ಳೆಯದು ಇರಬೇಕು. ನಾನು ವೈಯುಕ್ತಿಕವಾಗಿ ವಿರೋಧ ಮಾಡುತ್ತೇನೆ. They are going to expel me from the party. Under those circumstances, my membership should not be ceased.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ರೀತಿ ಯಾವುದೇ ರಾಜಕೀಯ ಪಕ್ಷದಲ್ಲಿ ತಮ್ಮ ಅಭಿಪ್ರಾಯ ಕೊಡುವುದಕ್ಕೆ ಅವಕಾಶವಿರುತ್ತದೆ. ಒಂದು ಸಾರಿ ಪಕ್ಷದಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ ಅದಕ್ಕೆ ಅದಿಯರ್ ಆಗಬೇಕಾಗುತ್ತದೆ. ಡಿಸ್‌ಕ್ವಾಲಿಫೈ ಆಗಬೇಕೆನ್ನುವುದು ಮಾನ್ಯ ಕೃಷ್ಣನ್‌ರ ವಾದ.

ಶ್ರೀ ವೈ. ಕೆ. ರಾಮಯ್ಯ.—ಪಕ್ಷದ ಸಿದ್ಧಾಂತಕ್ಕೆ ನಿಯಮದ ಚೌಕಟ್ಟಿನಲ್ಲಿ ಸಂದರ್ಭ ಬಂದಾಗ ನಮ್ಮ ಮೆಂಬರ್‌ಶಿಪ್ ಸೀಸ್, ಆಗುತ್ತದೆಂದು ತಂದಿಲ್ಲವೆಂದು ಕಾಣುತ್ತದೆ. ಎರಡನೆಯ ಕಾರಣ ವೇನೆಂದರೆ expulsion of the membership of a person from the party. It is not at his instance. It is at the instance of his party ಇಲ್ಲಿ ಇರುವುದು ವಾಲೆಂಟರಿಯಾಗಿ ನಾನೇ ನಾನಾಗಿ ರಾಜೀನಾಮೆ ಕೊಡುತ್ತೇನೆ. ಅಥವಾ ವಿರೋಧ ವಾಗಿ ಓಟು ಹಾಕಿದ್ದಾನೆಂದು ತಿಳಿದುಕೊಂಡು If he ceases to be a member of the party. At the instance of the Commander of the party, I am ceased to be a member ಮೆಂಬರ್ ಶಿಪ್‌ಸೀಸ್ ಆಗುವ ಪರಿಸ್ಥಿತಿಯನ್ನು ತರಬೇಕೆನ್ನುವುದನ್ನು ಬಹುಶಃ ನಾನು ಒಪ್ಪಿಕೊಳ್ಳುವುದಿಲ್ಲ. ನಮಗೆ ತೊಂದರೆಯಾಗುತ್ತದೆ. ಇಷ್ಟನ್ನು ಹೇಳಿ ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಕರ್ನಾಟಕ ರಾಜ್ಯ ಸಾರ್ವಜನಿಕ ಜೀವನದ ಅನೀತಿಯ ಅಧಃಪತನಕ್ಕೆ ಕಡಿವಾಣ ಹಾಕುವುದರಲ್ಲಿ ಇದು ಮೊಟ್ಟ ಮೊದಲನೆಯದಾಗಿದೆ. ರಾಜ್ಯಮಟ್ಟದಲ್ಲಿ ಪಕ್ಷಾಂತರ ವಿರೋಧ ಕಾಯಿದೆ ಯನ್ನು ತಂದಂಥ ಕೀರ್ತಿ ಜನತಾ ಪಕ್ಷದ ಸರ್ಕಾರಕ್ಕೆ ಸೇರಿದೆ. ಇದನ್ನು ಜನತಾ ಪಕ್ಷದ ಸರ್ಕಾರ ಅಲ್ಲದೆ ಬೇರೆ ಪಕ್ಷದವರು ತಂದಿದ್ದರೂ ನಾನು ಅದನ್ನು ಸ್ವಾಗತಿಸುತ್ತಿದ್ದೆ. ನಾವು ಮಾಡಿದಮೇಲೆ ಕೇಂದ್ರದವರು ತಂದಿದ್ದಾರೆ. ಇವತ್ತು ಮಂಡಲ್ ಪಂಚಾಯತ್‌ಗೆ ತಂದಿದ್ದೇವೆ. ನಾವು ಸಾರ್ವಜನಿಕ ಕೆಲಸ ಮಾಡತಕ್ಕಂಥ ಜನ ನಮ್ಮದೇ ಆದಂಥ ನೀತಿನಿಯಮಗಳನ್ನು ರೂಪಿಸಿಕೊಂಡು ಅದರ ಚೌಕಟ್ಟಿ ನಲ್ಲಿ ರಾಜಕೀಯ ಮಾಡುವಂಥ ದೊಡ್ಡತನ ತೋರದೆ ಯಾವುದಾದರೂ ದಾರಿಯಲ್ಲಿ ಚುನಾವಣೆಯನ್ನು ಗೆಲ್ಲಬೇಕು ಎನ್ನುವ ಸಣ್ಣತನವನ್ನು ನಿಲ್ಲಿಸಬೇಕು ಎನ್ನುವವರೆಗೆ ರಾಷ್ಟ್ರಮಟ್ಟದಲ್ಲಿ, ಪಂಚಾಯತ್ ಮಟ್ಟದಲ್ಲಿ ಇದರ ಅವಶ್ಯಕತೆ ಇದೆ. ಆದ್ದರಿಂದ ಇದನ್ನು ಒಪ್ಪಿ ಈ ವಿಧೇಯಕವನ್ನು ಸ್ವಾಗತಿಸಿ ಇದನ್ನು ಒಂದು ಕಾನೂನನ್ನಾಗಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಖರ್ಗೆಯವರೇ ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಒಂಬತ್ತು ಮಂದಿ ಸದಸ್ಯರು ಮಾತನಾಡುವವರಿದ್ದಾರೆ. ನಾಳೆ ಇದನ್ನು ಮುಂದುವರೆಸೋಣ.

ಅಧ್ಯಕ್ಷರು.—ಆಗಲಿ ಚರ್ಚೆಯನ್ನು ನಾಳೆಗೆ ಮುಂದೂಡಲಾಗಿದೆ. ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಭೆ ಪುನಃ ಸೇರುತ್ತದೆ.

(ಸಭೆಯು ಐದು ಗಂಟೆ ಐದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೪ನೇ ಫೆಬ್ರುವರಿ ಮಾಹೆ ೧೯೮೭ರ ಬುಧವಾರದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಿತು)

ಕಾ, ಸೂ, ೫೨